


# ಮುತ್ತಿನ ಮಣಿ

## ಎರಡನೆ ಭಾಸ್ಕರಾಚಾರ್ಯ(AD1114 - 1185) ರ ಜೀವನ ಮತ್ತು ಕೃತಿಗಳನ್ನು ಪರಿಚಯಿಸುವ ಕಿರು ನಾಟಕ

**ಸಂಗ್ರಹ :**
**ವೆಂಕಟೇಶ ಮೂರ್ತಿ,**
**ನಿವೃತ್ತ ಶಿಕ್ಷಣಾಧಿಕಾರಿ, ಕೇಂದ್ರೀಯ ವಿದ್ಯಾಲಯ ಸಂಗಠಣೆ.**

**ಗೌರವ ಮುಖ್ಯಸ್ಥ, ವೇದಗಣಿತ ವಿಭಾಗ, ರಾಷ್ಟ್ರೀಯ ವೇದವಿಜ್ಞಾನ ಸಂಸ್ಥೆ (ರಿ)**
**ಶ್ರೀ ಶ್ರೀಪಾದರಾಜ ಮಠ, ಮುಳಬಾಗಿಲು ಕೋಲಾರ ಜಿಲ್ಲೆ.**
**ಚಾಮರಾಜಪೇಟೆ, ಬೆಂಗಳೂರು (ಪ್ರಧಾನ್ ಕಛೇರಿ)**

# ಮುತ್ತಿನ ಮಣಿ

(ಎರಡನೆ ಭಾಸ್ಕರಾಚಾರ್ಯರ ಜೀವನ ಮತ್ತು ಕೃತಿಗಳನ್ನು ಪರಿಚಯಿಸುವ ಕಿರು ನಾಟಕ)

*ಎರಡನೆ ಭಾಸ್ಕರಾಚಾರ್ಯರು ಶಾಲಿವಾಹನ ಶಕ ೧೦೩೬* (ಕ್ರಿ.ಶ. 1114) *ರಲ್ಲಿ ಬಿಜ್ಜಳಬಿಡ ಎಂಬ ಗ್ರಾಮದಲ್ಲಿ ಜನಿಸಿದರು. ಅವರು ತಮ್ಮ ಜೀವಿತಕಾಲದಲ್ಲಿಯೇ ನಿಷ್ಣಾತಖಗೋಳಜ್ಞ , ಗಣಿತಶಾಸ್ತ್ರಚತುರ, ವೇದವಿಶಾರದ, ಕವಿರ್ಭಾಸ್ಕರ ಎಂದೆಲ್ಲಾ ಪ್ರಖ್ಯಾತರಾಗಿದ್ದರು. ಅವರ ಜೀವನದ ಬಗೆಗೆ ಒಂದು ಕಥೆಯಿದೆ. ಅದನ್ನು ಆಧಾರವಾಗಿಸಿ ಅವರ ಕೃತಿಗಳಾದ ಲೀಲಾವತೀ ಮತ್ತು ಬೀಜಗಣಿತ ಗ್ರಂಥಗಳಲ್ಲಿರುವ ಕೆಲವು ಗಣಿತಕವನಗಳನ್ನು ಪರಿಚಯಿಸುವುದೇ ಈ ನಾಟಕದ ಉದ್ದೇಶ. ಇದಕ್ಕೆ ಪ್ರೇರಣೆ, ಎನ್.ಸಿ.ಇ.ಆರ್.ಟಿ ಮತ್ತು ಸಿ.ಬಿ.ಎಸ್.ಇ. ತಯಾರಿಸಿದ ಗಣಿತ ಪಾಠ್ಯಕ್ರಮದಲ್ಲಿ ಗಣಿತ ಚರಿತ್ರೆಯನ್ನು ತಿಳಿಸಬೇಕೆಂದು ಹೇಳಿರುವುದಲ್ಲದೆ, ಭಾರತೀಯಗಣಿತಚರಿತ್ರೆ ಮತ್ತು ಗಣಿತಜ್ಞರ ಹಾಗೂ ಅವರ ಕೊಡುಗೆಯ ಬಗೆಗೂ ಗಮನಹರಿಸಬೇಕೆಂದು ತಿಳಿಸಿರುವುದು.*

*ಈ ನಾಟಕದ ಆಂಗ್ಲ ಅವತರಣಿಕೆಯನ್ನು ಹಲವುಬಾರಿ ಪ್ರದರ್ಶಿಸಲಾಗಿದೆ. ಹಾಗೆ ಅದು ಪ್ರದರ್ಶಿಸಲ್ಪಟ್ಟಾಗ ಅದರಲ್ಲಿರುವ ಗಣಿತಕವನಗಳನ್ನು ಶಾಸ್ತ್ರೀಯ ರಾಗಗಳಲ್ಲಿ ಹಾಡಿಸಲಾಯಿತು. ಈ ನಾಟಕವೇ ಅಲ್ಲದೆ, ಇದರಲ್ಲಿರುವ ಗಣಿತಕವನಗಳನ್ನು ಶಾಸ್ತ್ರೀಯರಾಗಗಳಲ್ಲಿ ಸಂಗೀತಗಾರರಿಂದಹಾಡಿಸಿ ಅವುಗಳ ಅರ್ಥ ಮತ್ತು ಇಂದಿನ ಗಣಿತ ಭಾಷೆಯಲ್ಲಿ ಅವುಗಳ ವಿವರಣೆಯನ್ನು ನೀಡುವ* ***ಮುತ್ತಿನ ಮಣಿ****ಕಾರ್ಯಕ್ರಮವನ್ನು* ***ಬೆಂಗಳೂರು ದೂರದರ್ಶನ****ವು* ***ಸಂಸ್ಕೃತ ಸೌರಭ*** *ದಲ್ಲಿ ಎರಡು ಕಂತುಗಳಲ್ಲಿ, ಕ್ರಿ.ಶ. ೧೯೯೯ ಮತ್ತು ಕ್ರಿ.ಶ. ೨೦೦೦ ರಲ್ಲಿ ಎರಡು ಬಾರಿ ಪ್ರಸಾರಮಾಡಿತು.*

*International Academy for creative Teaching, Bellary Road , Hebbal, Bangalore ನ ವಿದ್ಯಾರ್ಥಿ ಶಿಕ್ಷಕರು ಇಂಗ್ಲಿಷ್ ಮತ್ತು ಕನ್ನಡದಲ್ಲಿ ಮೊದಲಬಾರಿಗೆ ಈ ನಾಟಕವನ್ನು ಅಭ್ಯಾಸಮಾಡಿದರು. ದೈವಾನುಗ್ರಹದಿಂದ ಮೊತ್ತಮೊದಲಬಾರಿಗೆ ಕನ್ನಡದಲ್ಲಿ ಅಭ್ಯಾಸಮಾಡಿದ ನಾಟಕವು ಸೆಪ್ಟೆಂಬರ್ ೨೨, ೨೦೦೪ ರಂದು ಬೆಂಗಳೂರಿನ ಗಾಯನಸಮಾಜದಲ್ಲಿ ಮುಳಬಾಗಿಲುಮಠದ ಶ್ರೀಗಳು ಶ್ರೀ ಶ್ರೀ ವಿಜ್ಞಾನನಿಧಿತೀರ್ಥಶ್ರೀಪಾದಂಗಳವರ ದಿವ್ಯಸಮ್ಮುಖದಲ್ಲಿ ನಡೆದ "ವೇದ–ವಿಜ್ಞಾನ ಸಮ್ಮೇಳನ"ದ ಅಂಗವಾಗಿ ಪ್ರದರ್ಶಿತವಾಯಿತು.*

*ಆದರ ಆಂಗ್ಲ ಅವತರಣಿಕೆಯು ಅಕ್ಟೋಬರ್ ೨೭, ೨೦೦೪ ರಂದು ಬಸವನಗುಡಿಯ (ಬೆಂಗಳೂರು) ನ್ಯಾಷನಲ್ ಕಾಲೇಜಿನ ಆವರಣದಲ್ಲಿರುವ* Bangalore Science Forum *ನ ಸಾಪ್ತಾಹಿಕ ಕಾರ್ಯಕ್ರಮದ ಅಂಗವಾಗಿ ಪ್ರದರ್ಶಿತವಾಯಿತು. ಈ ನಾಟಕವನ್ನು ಪೂರ್ಣವಾಗಿ ನೋಡಿದ ಖ್ಯಾತ ಶಿಕ್ಷಣತಜ್ಞ Dr. H. Narasimhaiah ನವರು ತಮ್ಮ ಮೆಚ್ಚುಗೆಯನ್ನು “Out of 1966 programmes held in this hall since 1964, this is a unique programme” ಎಂದು ವ್ಯಕ್ತಗೊಳಿಸಿದ್ದು ಅವರ ಹೃದಯವಂತಿಕೆ ಮತ್ತು ನಮ್ಮ ಪ್ರಯತ್ನಕ್ಕೆ ದೊರೆತ ಉತ್ತೇಜನ.*

## ಪ್ರವೇಶ – ೧

*(ಸೂತ್ರಧಾರ ಮತ್ತು ಅವನ ಗೆಳತಿಯ ರಂಗಪ್ರವೇಶ)*

ಇಬ್ಬರು ಜೊತೆಯಲ್ಲಿ:– ಕಲಾಭಿಮಾನೀ ವೀಕ್ಷಕರೆಲ್ಲರಿಗೂ ಸ್ವಾಗತ, ಆದರದ ಸುಸ್ವಾಗತ. *(ನಮಿಸುವರು, ಅಷ್ಟರಲ್ಲಿ ನೇಪಥ್ಯದಿಂದ)*

(ರಾಗ : ಉದಯರಾಗ)

**ಉತ್ಪಾದಕಂ ಯತ್ಪ್ರವದಂತಿ ಬುಧ್ಧೇರಧಿಷ್ಠಿತಂ ಸತ್ಪುರುಷೇಣ ಸಾಂಖ್ಯಾಃ ।**
**ವ್ಯಕ್ತಸ್ಯ ಕೃತ್ಸ್ನಸ್ಯ ತದೇಕಬೀಜಮವ್ಯಕ್ತಮೀಶಂ ಗಣಿತಂ ಚ ವಂದೇ ॥]**

ಗೆಳತಿ :– ಈಗ ಹಾಡಿದ ದೇವತಾವಂದನೆ ಹೊಸದಾಗಿದೆ. ಇದು ಯಾರ ರಚನೆ ?

ಸೂತ್ರದಾರ :– ಇದು ಹೊಸದೇನಲ್ಲ. . . . ಕ್ರಿ.ಶ. 12 ನೇ ಶತಮಾನದಲ್ಲಿ ಭಾಸ್ಕರಾಚಾರ್ಯರು ರಚಿಸಿದ್ದು .

ಗೆಳತಿ :– ಹಾಗೆಂದರೆ, ಈಗ ನಾವು ಪ್ರಸ್ತುತಪಡಿಸುವ ನಾಟಕದ ಪ್ರಮುಖ ಪಾತ್ರ ಗಣಿತಜ್ಞಭಾಸ್ಕರಾಚಾರ್ಯರು ರಚಿಸಿದ್ದೇ ! . . . ಆದರೆ, ಈ ದೇವತಾವಂದನೆ ಕವನದಂತಿದೆ !, ಅದೂ, ಶುಷ್ಕ ಗಣಿತಜ್ಞರಿಂದ !

ಸೂತ್ರದಾರ :– ಇದರಲ್ಲಿ ಆಶ್ಚರ್ಯವೇನು ? ಹಿಂದಿನ ಸಂಸ್ಕೃತ ಗ್ರಂಥಗಳಲ್ಲಿ ಅನೇಕವಿಷಯಗಳು ಶ್ಲೋಕಗಳ ರೂಪದಲ್ಲೇ ಇವೆ.

**ಮುತ್ತಿನಮಣಿ**

[ಎರಡನೇ ಭಾಸ್ಕರಾಚಾರ್ಯರ ಜೀವನ ಮತ್ತು ಕೃತಿಗಳನ್ನು ಪರಿಚಯಿಸುವ ಕಿರು ನಾಟಕ]

ಗೆಳತಿ :– ನಿಜ, ವಿಷಯಗಳು ಶ್ಲೋಕಗಳರೂಪದಲ್ಲಿದ್ದರೆ ನೆನಪಿನಲ್ಲಿಡುವುದು ಸುಲಭ. . . . ಆದ್ರೆ ಈಗ ಹಾಡಿದ್ದು ಶ್ಲೋಕಗಳನ್ನಲ್ಲ, ಕವನಗಳನ್ನ. . . ಆಶ್ಚರ್ಯ.

ಸೂತ್ರದಾರ :– ಹೌದು, ಅವರು ರಚಿಸಿದ ಗಣಿತಶ್ಲೋಕಗಳಲ್ಲಿ ಬಹುತೇಕ, . . . ಗಣಿತಕವನಗಳು. ಅದಕ್ಕೇ ಅವರು ಕವಿಭಾರ್ಸ್ಕರ.

ಗೆಳತಿ :– ಕವಿಭಾರ್ಸ್ಕರ ! . . . ಈಗ ಹಾಡಿದ ಕವನ ಇಂಪಾಗಿತ್ತು. . . . ಅವುಗಳ ಅರ್ಥವಾದ್ರೂ ಏನು ?

ಸೂತ್ರದಾರ :– ಈಗ ಹಾಡಿದ ದೇವತಾವಂದನೆಯ ಕವನ ಬೀಜಗಣಿತ ಗ್ರಂಥದ ಪ್ರಥಮಶ್ಲೋಕ. ಈ ಶ್ಲೋಕದ ಅರ್ಥ ತಿಳಿಯಿತೇ ?

ಗೆಳತಿ :– ಇದರಲ್ಲಿ, ಗಣಿತ . . . ಸಾಂಖ್ಯಾ . . . ಅಂತ ಏನೇನೋ ಇದ್ಯಪ್ಪಾ . . . ನನಗೇನೇನೂ ಅರ್ಥವಾಗ್ಲಿಲ್ಲ . . . ನೀವೇ ಹೇಳಿ.

ಸೂತ್ರಧಾರ :– ಹಾಗೇ ಆಗ್ಲಿ, . . . ಈ ಕವನದ ಅರ್ಥ . . *"ಅಖಂಡವಿಶ್ವದ ಸೃಷ್ಟಿಕರ್ತ, ಅಗೋಚರಶಕ್ತಿಯ ಆದಿಮೂಲ, ಅಖಂಡಜ್ಞಾನದ ಅನಂತ್ಯ ಉಗಮ ಎಂದೆಲ್ಲಾ ಆರಾಧಿಸಲ್ಪಡುವ ಭಗವಂತನಿಗೂ, ಗಣಿತಜ್ಞರುಗಳಿಂದ ಇಂತಹುವೇ ಅತಿಶಯಗುಣಗಳನ್ನು ಆರೋಪಿಸಲ್ಪಡುವ ಬೀಜಗಣಿತಕ್ಕೂ ನಮಸ್ಕರಿಸುತ್ತೇನೆ."*

ಗೆಳತಿ :– ನನಗೊಂದು ಸಂದೇಹ. ಹಿಂದಿನ ಕಾಲದ ಭಾರತದ ಇತಿಹಾಸ ನಿಖರವಲ್ಲ, ಇದಕ್ಕೆ ಕಾರಣ ಆಗಿನ ಕಾಲದ ಭಾರತೀಯರು ಅಂದಿನ ವಿದ್ಯಮಾನಗಳನ್ನು ಸರಿಯಾಗಿ ದಾಖಲಿಸಿಲ್ಲ ಅನ್ನೋದನ್ನ ಕೇಳಿದ ಜ್ಞಾಪಕ.

ಸೂತ್ರಧಾರ :– ನೀವು ಕೇಳಿರೋದು ಭಾಗಶಃ ನಿಜ. . . . . ಆದರೆ ಭಾಸ್ಕರಾಚಾರ್ಯರು, ಅವರು ಜನಿಸಿದ ಸ್ಥಳ, ಜನಿಸಿದ ಕಾಲ, ಅವರ ತಂದೆಯ ವಿಷಯ, ಸಿದ್ಧಾಂತಶಿರೋಮಣಿಯನ್ನು ಬರೆದಾಗ ಅವರ ವಯಸ್ಸು ಇವುಗಳನ್ನೆಲ್ಲಾ ಸಿದ್ಧಾಂತಶಿರೋಮಣಿಯಲ್ಲಿ ತಿಳಿಸಿದ್ದಾರೆ. ಈಗ ಅದನ್ನ ಕೇಳೋಣ.

ರಾಗ : ಭೈರವಿ

**ಆಸೀತ್ಸಹ್ಯ ಕುಲಾಚಲಾಶ್ರಿತಪುರೇ ತ್ರೈವಿದ್ಯವದ್ವಜ್ಜನೇ**
**ನಾನಾಸಜ್ಜನಧಾಮ್ನಿ ಬಿಜ್ಜಳಬಿಡೇ ಶಾಂಡಿಲ್ಯಗೋತ್ರೋದ್ವಿಜಃ**
**ಶ್ರೌತಸ್ಮಾರ್ತವಿಚಾರಸಾರಚತುರೋ ನಿಶ್ಯೇಷವಿದ್ಯಾನಿಧಿಃ**
**ಸಾಧೂನಾಮವಧಿರ್ಮಹೇಶ್ವರಕೃತೇ ದೈವಜ್ಞಚೂಡಾಮಣಿಃ**
**ತತ್ಸಜ್ಜನಚರಣಾರವಿಂದಯುಗಳಪ್ರಾಪ್ತ:ಪ್ರಸಾದಸ್ಸುಧೀಃ**
**ಮುಗ್ದೋದ್ಬೋಧಕರೇ ವಿದಗ್ಧಗಣಕ ಪ್ರೀತಿಪ್ರದಾಂಪ್ರಸ್ಫುಟಾಮ್**
**ಏತದ್ವ್ಯಕ್ತಸದುಕ್ತಿಯುಕ್ತಿಬಹುಳಂ ಹೇಲಾವಗವ್ಯಂ ವಿದಾಮ್**
**ಸಿದ್ಧಾಂತಗ್ರಥನಂ ಕುಬುದ್ಧಿಮಥನಂ ಚಕ್ರೇ ಕವಿಭಾರ್ಸ್ಕರ**
**ರಸಗುಣಪೂರ್ಣಮಹಿ ಸಮಶಕನೃಪೇ ಸಮಯೇಭಾವೋನ್ಮವೋತ್ಪತ್ತಿಃ ।**
**ರಸಗುಣ ವರ್ಷೇಣ ಮಯಾ ಸಿದ್ಧಾಂತಶಿರೋಮಣೀ ರಚಿತಃ ॥**

ಗೆಳತಿ :– ಇದರ ತಾತ್ಪರ್ಯ ನಾನೇ ಹೇಳ್ಲಾ. . . . *ಸಹ್ಯಾದ್ರಿಕುಲಪರ್ವತಗಳತಪ್ಪಲಿನಲ್ಲಿ ಸಕಲವಿದ್ಯಾ ಪಾರಂಗತರಿಗೂ, ನಾನಾಸಜ್ಜನರಿಗೂ ಆಶ್ರಯವಾದ ಬಿಜ್ಜಳಬಿಡ ಎಂಬ ಪಟ್ಟಣವಿದೆ. ಅಲ್ಲಿ ಶ್ರೌತಸ್ಮಾರ್ತವಿಚಾರಸಾರಚತುರ, ದೈವಜ್ಞಚೂಡಾಮಣಿ, ಸಾಧು, ಸಜ್ಜನ ಎಂದೆಲ್ಲಾ ಹೊಗಳಿಕೆಗೆ ಪಾತ್ರರಾದ ಶಾಂಡಿಲ್ಯಗೋತ್ರದ ಮಹೇಶ್ವರ ಎಂಬ ಗೌರವಾನ್ವಿತ ಆಚಾರ್ಯರಿದ್ದಾರೆ. ಅಂತಹ ಸಜ್ಜನರ ಮುಗ್ಧಮಗನಾಗಿ ಜನಿಸಿದ ನನಗೆ, ಗಣಿತಶಾಸ್ತ್ರದ ಗಹನವಿಷಯಗಳು ಅಮೂಲ್ಯಪ್ರಸಾದದ ಅಮೃತ ಧಾರೆಯಂತೆ ಅವರಿಂದಲೇ ದೊರಕಿತು. ಹೀಗೆ ದೊರೆತ ಜ್ಞಾನದಿಂದ ಸಾಮಾನ್ಯರೂ ಸುಲಭವಾಗಿ ಗ್ರಹಿಸುವಂತೆಯೂ, ದುರಹಂಕಾರಿಗಳ ಅಹಂಕಾರವು ಅಡಗುವಂತೆಯೂ, ಕಾವ್ಯಮಯ ಗಣಿತಕವನಗಳನ್ನು ರಚಿಸಿ,ಕವಿಭಾರ್ಸ್ಕರ ಎನಿಸಿಕೊಂಡೆನು. . . .* ಆದರೆ, ಈ ಶ್ಲೋಕದಲ್ಲಿ ಅವರು ಜನಿಸಿದ ವರ್ಷವನ್ನು ತಿಳಿಸುವ ಸಂಖ್ಯೆಗಳೇ ಇಲ್ಲವಲ್ಲ !

ಸೂತ್ರಧಾರ :– ಈ ಶ್ಲೋಕದಲ್ಲಿರೋ **"ರಸಗುಣಪೂರ್ಣಮಹೀ ಸಮಶಕನೃಪೇ ಸಮಯೇ ಭಾವೋನ್ಮವೋತ್ಪತ್ತಿ."** ಎನ್ನುವ ವಾಕ್ಯ *"ನನ್ನ ಜನನ ಶಾಲಿವಾಹನಶಕ ೧೦೩೬ ರಲ್ಲಿ"* ಎಂದು ಸೂಚಿಸುತ್ತೆ.

ಗೆಳತಿ :– ಸ್ವಲ್ಪ ಅರ್ಥವಾಗುವಂತೆ ತಿಳಿಸ್ತೀರಾ.

**ಮುತ್ತಿನಮಣಿ**

[ಎರಡನೇ ಭಾಸ್ಕರಾಚಾರ್ಯರ ಜೀವನ ಮತ್ತು ಕೃತಿಗಳನ್ನು ಪರಿಚಯಿಸುವ ಕಿರು ನಾಟಕ]

ಸೂತ್ರಧಾರ :– ಸಂಖ್ಯೆಗಳನ್ನು ಶ್ಲೋಕಗಳಲ್ಲಿ ತಿಳಿಸಲು ಅಕ್ಷರಗಳನ್ನೋ ಅಥವಾ ಪದಗಳನ್ನೋ ಸಂಖ್ಯಾಸೂಚಕ ಗಳನ್ನಾಗಿ ಬಳಸಲಾಗುತ್ತಿತ್ತು. ಈ ಶ್ಲೋಕದಲ್ಲಿರೋ **'ರಸಗುಣಪೂರ್ಣಮಹೀ'** ಅನ್ನೋ ಪದ ದಲ್ಲಿರೋ ***ರಸ*** ಸಂಖ್ಯಾಸೂಚಕ ೬ ನ್ನ ಸೂಚಿಸುತ್ತೆ. ಏಕೆಂದರೆ *ರಸ, ಷಡ್ರಸ* ಆರು ರಸಗಳು; *ಸಿಹಿ, ಉಪ್ಪು, ಹುಳಿ, ಖಾರ, ಕಹಿ ಮತ್ತು ಒಗರು.* ಹೀಗೆಯೇ ***ಗುಣ*** ಸಂಖ್ಯಾಸೂಚಕ ೩ ನ್ನ ಸೂಚಿಸುತ್ತೆ, ಏಕೆಂದರೆ *ಗುಣಗಳು ಮೂರು; ತಾಮಸ, ರಜಸ್ ಮತ್ತು ಸತ್ವ.* ***ಪೂರ್ಣ*** ಅನ್ನೋ ಪದ *ಅನಂತ ಹಾಗೂ ಶೂನ್ಯ ಅನ್ನೋ ಎರಡು ಅರ್ಥವನ್ನೂ ಕೊಡುತ್ತೆ. ಆದರೆ ಅದು ಸಂಖ್ಯಾಸೂಚಕವಾದಾಗ ೦ ಯನ್ನೆ ಸೂಚಿಸುತ್ತೆ.* ***ಅಹಿ*** ಅನ್ನೋಪದದ ಸಂಖ್ಯಾಸೂಚಕ ೧, ಏಕೆಂದರೆ ಅಹಿ, ಆದಿಶೇಷ, ಭೂಮಂಡಲವನ್ನು ಹೊತ್ತಿರುವ ಏಕೈಕ ಆದಿಶೇಷ. ಆದ್ದರಿಂದ, **ಅಂಕಾನಾಂ ವಾಮತೋಗತಿಃ** ಅನ್ನುವ ಸೂತ್ರದಂತೆ **ರಸಗುಣ ಪೂರ್ಣಮಹೀ** ಅನ್ನೋ ಪದ, ಸಂಖ್ಯೆ ೧೦೩೬ ನ್ನ ಸೂಚಿಸುತ್ತೆ.

ಗೆಳತಿ :– ಹಾಗಾದರೆ, ಭಾಸ್ಕರಾಚಾರ್ಯರು ***"ನನ್ನ ಜನನ ಶಕವರ್ಷ ೧೦೩೬ ರಲ್ಲಿ"*** ಎಂದೂ, *"ರಸಗುಣ ವರ್ಷೇಣ ಮಯಾ ಸಿದ್ಧಾಂತಶಿರೋಮಣೀ ರಚಿತಃ"* ಅಂದರೆ *"ನನ್ನ ೩೬ ನೇ ವರ್ಷದಲ್ಲಿ ನನ್ನಿಂದ ಸಿದ್ಧಾಂತ ಶಿರೋಮಣಿಯು ರಚಿತವಾಯಿತು"* ಅಂತ್ಲೂ ತಿಳಿಸಿದಾರೆ. . ಅಂದಹಾಗೆ ಈಗಲೂ ನಾವು ನಮ್ಮ ರಾಷ್ಟ್ರೀಯ ಪಂಚಾಂಗದಲ್ಲಿ ಶಕವರ್ಷವನ್ನೇ ಬಳಸ್ತೀವಿ ಅಲ್ಲ್ವೇ

ಸೂತ್ರಧಾರ :– ಹೌದು, ಶಕವರ್ಷ ಅಂದ್ರೆ, ಶಾಲಿವಾಹನಶಕ. ಕ್ರಿ.ಶ. ೭೮ ರಲ್ಲಿ ಶಾಲಿವಾಹನನು ಪಟ್ಟಾಭಿಷಿಕ್ತನಾದ ವರ್ಷದಿಂದ ಪ್ರಾರಂಭವಾಯಿತು.

ಗೆಳತಿ :– ಅಂದರೆ, ಭಾಸ್ಕರಾಚಾರ್ಯರು ಶಕ ವರ್ಷ ೧೦೩೬ ರಲ್ಲಿ ಅಂದರೆ ಕ್ರಿ.ಶ. 1114 ರಲ್ಲಿ ಜನಿಸಿದರು, ತಮ್ಮ ೩೬ ನೇವಯಸ್ಸಿನಲ್ಲಿ ಅಂದರೆ ಕ್ರಿ.ಶ. 1150 ರಲ್ಲಿ ಅವರು ಸಿದ್ಧಾಂತಶಿರೋಮಣಿಯನ್ನು ರಚಿಸಿದರು ! . .

ಸೂತ್ರಧಾರ :– ಸಿದ್ಧಾಂತಶಿರೋಮಣಿಯನ್ನ ಲೀಲಾವತೀ, ಬೀಜಗಣಿತ, ಗ್ರಹಗಣಿತ ಮತ್ತು ಗೋಳಾಧ್ಯಾಯ ಎಂದು ನಾಲ್ಕುಭಾಗಗಳಾಗಿ ವಿಂಗಡಿಸಿದ್ದಾರೆ.

ಗೆಳತಿ :– ಬೀಜಗಣಿತಕ್ಕೆ ಆ ಹೆಸರನ್ನ ಕೊಟ್ಟವರು ಭಾಸ್ಕರಾಚಾರ್ಯರೇ ಅಂತ ಕೇಳಿದೀನಿ, ನಿಜವೇ !

ಸೂತ್ರಧಾರ :– ಹೌದು, . . ಅವರೇ ಹೇಳಿರೋಹಾಗೆ ಅವರು, ಅವರಿಗಿಂತ ಹಿಂದಿನವರ ವಿಧಾನಗಳನ್ನ ಸರಳಗೊಳಿಸಿದ್ದೇ ಅಲ್ಲದೆ, ಖಗೋಳದ ಅಧ್ಯಯನಕ್ಕೆ ಅವಶ್ಯಕವಾದ ನೂತನ ಗಣಿತ ಸೂತ್ರಗಳು, ಹಾಗೂ ಸಮಸ್ಯೆಗಳನ್ನು ಸುಲಭವಾಗಿ ಬಿಡಿಸಬಲ್ಲವಿಧಾನಗಳನ್ನೂ ಕಂಡುಹಿಡಿದಿದ್ದಾರೆ.

ಗೆಳತಿ :– ಸ್ವಲ್ಪ ವಿಷದವಾಗಿ ಹೇಳ್ತೀರಾ.

ಸೂತ್ರಧಾರ :– ಅದೇ ಅಲ್ಲ್ವೇ ಈ ಕಾರ್ಯಕ್ರಮದ ಉದ್ದೇಶ. . . . ಬನ್ನಿ, ಕಿರಿಯ ಭಾಸ್ಕರನಲ್ಲಿ ಪ್ರತಿಭೆ ಅರಳುವುದನ್ನ ನೋಡೋಣ.

## ದೃಶ್ಯ – ೧

*(ಬಿಜ್ಜಳಬಿಡದ ಹೊರವಳಯದಲ್ಲಿರುವ ಅರಣ್ಯದಲ್ಲಿ ಒಂದು ಆಶ್ರಮ. ಆಶ್ರಮದ ಪ್ರಮುಖಸ್ಥಳದಲ್ಲಿ ಆಚಾರ್ಯ ಮಹೇಶ್ವರರ ಪರ್ಣಕುಟೀರ. ಅದರ ಮುಂಭಾಗದಲ್ಲಿ ಒಂದು ದೊಡ್ಡ ಆಲದಮರ. ಆಲದಮರದ ಸುತ್ತಲೂ ಆಯತಾಕಾರದ ಎತ್ತರದ ಸಮತಲಸ್ಥಳ. ಅದರಮೇಲೆ ಕೃಷ್ಣಾಜಿನವನ್ನ ಹಾಸಿ ವ್ಯಾಸಪೀಠವನ್ನಿಟ್ಟಿದೆ. ಆ ಸಮತಲಸ್ಥಳದ ಮೇಲಿನ ವ್ಯಾಸಪೀಠದ ಎದುರಿನ ನೆಲದಮೇಲೆ ವಿದ್ಯಾರ್ಥಿಗಳು ಕುಳಿತುಕೊಳ್ಳಲು ಅನುಕೂಲವಾದ ಮೃದುಗರಿಕೆಯಹಾಸುಗಳು. ಸಮೀಪದಲ್ಲೆ ಬಿಳಿದಾವರೆಗಳಿಂದ ಕಂಗೊಳಿಸುತ್ತಿರುವ ತಿಳಿನೀರಿನ ಕೊಳ. ಕಿರಿಯಭಾಸ್ಕರನೊಬ್ಬನೇ ಕೊಳದಸಮೀಪದ ಆಸನದಲ್ಲಿ ಕುಳಿತು, ಬಿಳಿದಾವರೆಗಳನ್ನೇ ಒಮ್ಮೊಮ್ಮೆ ನೋಡುತ್ತಾ, ತಾಳೆಯಗರಿಯಮೇಲೆ ಏನನ್ನೋ ಬರೆಯುತ್ತಿದ್ದಾನೆ. ಗೆಳೆಯ ಸಾಯನ ಬಂದದ್ದು, ಬಂದು ಬಳಿಯಲ್ಲಿ ಕುಳಿತದ್ದು, ಇವುಗಳ ಅರಿವೇ ಅವನಿಗಿಲ್ಲ.)*

ಸಾಯನ :– *(ಭಾಸ್ಕರನು ಬರೆದು ಮುಗಿಸಿದಮೇಲೆ)* ಏನನ್ನೋ ಬರೀತಿದ್ದೀ, ನಾನೂ ನೋಡ್ಬೋದಾ ಭಾಸ್ಕರಾ ?

ಭಾಸ್ಕರ :– ಧಾರಾಳವಾಗಿ, . . *(ತಾಳೆಗರಿಯನ್ನುಕೊಡುತ್ತ).* ನಿನ್ನ ಅಭಿಪ್ರಾಯಾನ ನಿಸ್ಸಂಕೋಚವಾಗಿ ಹೇಳು.

ಸಾಯನ :– *(ಮನಸಿನಲ್ಲೇ ಓದಿಕೊಂಡ ನಂತರ)* . . . ಓ, ಎಂತಹ ಸುಂದರ ಕವನ, . . . ಅದೂ ಗಣಿತಸಮಸ್ಯೆಯ ಮೇಲೆ !

## ಮುತ್ತಿನಮಣಿ

[ಎರಡನೇ ಭಾಸ್ಕರಾಚಾರ್ಯರ ಜೀವನ ಮತ್ತು ಕೃತಿಗಳನ್ನು ಪರಿಚಯಿಸುವ ಕಿರು ನಾಟಕ]

*(ಅಷ್ಟರಲ್ಲಿ ಉಳಿದ ವಿದ್ಯಾರ್ಥಿಗಳು ಒಬ್ಬೊಬ್ಬರಾಗಿ ಬಂದು ಕುಳಿತುಕೊಳ್ಳುವರು. ಪರ್ಣಕುಟಿಯ ಬಾಗಿಲಿಗೆ ಬಂದ ಗುರುಗಳು, ಸಾಯನನ ಮಾತನ್ನು ಕೇಳಿ ಬಾಗಿಲಿನ ಮರೆಯಲ್ಲಿ ನಿಲ್ಲುವರು.)*

ಭಾಸ್ಕರ :– ಇದನ್ನ ದೇಶೀ ರಾಗಕ್ಕೆ ಅಳ್ವಡಿಸಿದೀನಿ. . . . ಹಾಡಿ ತೋರಿಸ್ತೀಯಾ ಸಾಯನ ?

ಸಾಯನ :– ಖಂಡಿತವಾಗಿ. . . .

*(ದೇಶೀರಾಗದಲ್ಲಿ ಅವನು ಹಾಡುವಾಗ ಗುರುಗಳು ಬಾಗಿಲಮರೆಯಲ್ಲೇ ನಿಂತು ಕೇಳುವರು)*

***ಅಮಲಕಮಲರಾಶೇಸ್ತ್ರ್ಯಂಶ ಪಂಚಾಂಶ ಷಷ್ಠೈಃ***
***ತ್ರಿನಯನಹರಿಸೂರ್ಯಯೇನತುರ್ಯೇಣಚಾರ್ಯಾ***
***ಗುರುಪದಮಥಷಡ್ಭಿಃ ಪೂಜಿತಂ ಶೇಷಪದ್ಮೈಃ***
***ಸಕಲಕಮಲಸಂಖ್ಯಾಂ ಕ್ಷಿಪ್ರಮಾಖ್ಯಾಹಿತಸ್ಯ !!***

ಕೇಶವ :– ಇದೂ, . . . ಭಿನ್ನರಾಶಿಯ ಸಮಸ್ಯೆ.

ಲಾಂಗೂಲ :– ಗಣಿತವೇ ಕಷ್ಟ, . . . ಸಮಸ್ಯೇನ ಕವನದಲ್ಲಿ ಹೇಳಿದರೆ ದೇವರಿಗೇ ಪ್ರೀತಿ.

*(ಅಷ್ಟರಲ್ಲಿ ಗುರುಗಳು ಬರುವರು. ಎಲ್ಲರೂ ಎದ್ದುನಿಂತು ಪ್ರವರ ಹೇಳಿ, ನಿಂತಲ್ಲೇ ಬಾಗಿ ನಮಸ್ಕರಿಸುವರು.)*

ಗುರುಗಳು :– ಆಯುಷ್ಮಾನ್ ಭವ, . . . ವಿದ್ಯಾಭಿವೃದ್ಧಿರಸ್ತು, . . . ಸಕಲಾಭೀಷ್ಟಸಿದ್ಧಿರಸ್ತು *(ಗುರುಗಳು ಕುಳಿತಮೇಲೆ ಎಲ್ಲರೂ ಕುಳಿತುಕೊಳ್ಳುವರು)* ಕೇಶವ, . . . ಈಗ ಕೇಳಿದ ಸಮಸ್ಯೆಯೇನು ?

ಕೇಶವ :– *(ಎದ್ದುನಿಂತು)* ಅಪ್ಪಣೆ, ಆಚಾರ್ಯ *(ಕೈ ಮುಗಿಯುವನು, ಮುಂದುವರಿಸಿ)* ಪೂಜೆಗಾಗಿ ಸಂಗ್ರಹಿಸಿದ ಬಿಳಿದಾವರೆ ಹೂಗಳರಾಶಿಯಲ್ಲಿನ ಮೂರನೇಒಂದು ಭಾಗ ಈಶ್ವರನಾದ ಮುಕ್ಕಣ್ಣನಿಗೆ, ಐದನೇಒಂದುಭಾಗ ಶ್ರೀ ಹರಿಗೆ, ಆರನೇಒಂದು ಭಾಗ ಸೂರ್ಯನಿಗೆ, ನಾಲ್ಕನೇಒಂದು ಭಾಗ ಆರ್ಯೆಯಾದ ಪಾರ್ವತೀದೇವಿಗೆ ಅರ್ಪಿಸಿದ ಮೇಲೆ ಉಳಿದ ಆರು ಹೂಗಳನ್ನು ಗುರುಗಳ ಚರಣಕಮಲಗಳಲ್ಲಿ ಸಮರ್ಪಿಸಿದರೆ, ಪೂಜೆಗಾಗಿ ಸಂಗ್ರಹಿಸಿದ ಹೂಗಳೆಷ್ಟು ?

ಗುರುಗಳು :– ಈ ಸಮಸ್ಯೆಗೆ ಉತ್ತರವೇನು ಲಾಂಗೂಲ. *(ಅವನು ಸುಮ್ಮನಿರಲು)* ಯಾರಾದ್ರು ಹೇಳಬಹುದು.

ಭಾಸ್ಕರ :– *(ಎದ್ದುನಿಂತು, ಕೈ ಮುಗಿದು)* ಅಪ್ಪಣೆ ಕೊಟ್ಟರೆ ನಾನು ಹೇಳ್ತೀನಿ ಆಚಾರ್ಯ. *(ತಲೆಯಾಡಿಸಿ ಸಮ್ಮತಿಸುವರು)* ಮುಕ್ಕಣ್ಣನಿಗೆ ಅರ್ಪಿಸಿದ ಮೂರನೇಒಂದು ಭಾಗಕ್ಕೆ ಶ್ರೀ ಹರಿಗೆ ಅರ್ಪಿಸಿದ ಐದನೇಒಂದು ಭಾಗಾನ ಕೂಡಿದರೆ ಹದಿನೈದನೇಎಂಟು ಭಾಗ ಬರುತ್ತೆ. ಈ ಮೊತ್ತಕ್ಕೆ ಸೂರ್ಯನಿಗೆ ಸಮರ್ಪಿಸಿದ ಆರನೇಒಂದು ಭಾಗವನ್ನ ಕೂಡಿದರೆ ಬರೋದು ಮೂವತ್ತನೇಇಪ್ಪತ್ತೊಂದು ಭಾಗ, ಅಂದರೆ ಹತ್ತನೇಏಳುಭಾಗಕ್ಕೆ ಸಮ. ಹತ್ತನೇಏಳುಭಾಗಕ್ಕೆ ಪಾರ್ವತೀದೇವಿಗೆ ಸಮರ್ಪಿಸಿದ ನಾಲ್ಕನೇಒಂದು ಭಾಗವನ್ನ ಕೂಡಿದರೆ ಬರೋದು ಇಪ್ಪತ್ತನೇಹತ್ತೊಂಬತ್ತು ಭಾಗ. ಸಂಗ್ರಹಿಸಿದ ಒಂದುರಾಶಿ ಹೂಗಳಲ್ಲಿ ಪೂಜೆಯಲ್ಲಿ ಅರ್ಪಿಸಿದ ಇಪ್ಪತ್ತನೇಹತ್ತೊಂಬತ್ತು ಭಾಗವನ್ನ ಕಳೆದರೆ ಉಳಿಯುವುದು ಇಪ್ಪತ್ತನೇಒಂದು ಭಾಗ. ಇದು ಆಚಾರ್ಯರ ಚರಣಗಳಿಗೆ ಅರ್ಪಿಸಿದ ಆರು ಹೂಗಳಿಗೆ ಸಮ. ಆದ್ದರಿಂದ ರಾಶಿಯಲ್ಲಿದ್ದ ಹೂಗಳಸಂಖ್ಯೆ ನೂರಿಪ್ಪತ್ತು.

ಗುರುಗಳು :– ಸರಿಯಾಗಿ ಹೇಳಿದೆ ಭಾಸ್ಕರ. . . . *(ಎಲ್ಲರಿಗೂ)* ಏನಾದರೂ ಸಂದೇಹವಿದ್ಯೇ ?

ಭಾಸ್ಕರ :– ನನ್ನದೊಂದು ಸಂದೇಹ, . . . ಭಿನ್ನರಾಶಿಯ ಛೇದವು ಶೂನ್ಯಕ್ಕೆ ಅತಿ ಸಮೀಪವಾದಾಗ ಆ ಭಿನ್ನರಾಶಿಯ ಬೆಲೆಯೇನು, ಆಚಾರ್ಯ ?

ಲಾಂಗೂಲ :– *(ಮುಸಿ ಮುಸಿ ನಗುತ್ತಾ)* ಶೂನ್ಯಕ್ಕೆ ಅತಿಸಮೀಪ ಅಂದರೆ ಶೂನ್ಯವೇಅಲ್ಲವೇ. . . . ಶೂನ್ಯದಿಂದ ಭಾಗಿಸೋದಕ್ಕೆ ಎಲ್ಲಾದ್ರೂ ಸಾಧ್ಯಾನ ! *(ಎಲ್ಲರೂ ಮುಸಿ ಮುಸಿ ನಗುವರು).* ಭಿನ್ನರಾಶಿಯ ಛೇದ ಶೂನ್ಯವಾಗಿರಲು ಹೇಗೆತಾನೇ ಸಾಧ್ಯ ?

ಗುರುಗಳು :– ಲಾಂಗೂಲ, ಭಿನ್ನರಾಶಿಯಛೇದ ಶೂನ್ಯ ವಾಗಿರಬಾರದು. ನೀನು ಹೇಳಿದ್ದು ಸರಿ . . . ಅದಕ್ಕೇನು ಕಾರಣ, ಹೇಳು. *(ಸುಮ್ಮನಿರುವನು)*

ಸಾಯನ :– *(ಎಲ್ಲರೂ ಸುಮ್ಮನಿರಲು, ಎದ್ದುನಿಂತು)* ಅಪ್ಪಣೆಯಾದ್ರೆ, ನಾನು ಹೇಳ್ತೀನಿ, ಆಚಾರ್ಯ. *(ಗುರುಗಳು ಸಮ್ಮತಿಸುವರು)* ಭಿನ್ನರಾಶಿಯಲ್ಲಿರೋ ಮೇಲಿನಸಂಖ್ಯೆಯಾದ ಅಂಶವೇ ಭಾಜ್ಯ; ಕೆಳಗಿನಸಂಖ್ಯೆ ಛೇದ, ಭಾಜಕ; ಭಿನ್ನರಾಶಿಯಬೆಲೆಯೇ ಭಾಗಲಬ್ಧ. . . . ಆದ್ದರಿಂದ, ಭಾಗಹಾರದ ನಿಯಮದಂತೆ, ಛೇದ ಮತ್ತು ಭಿನ್ನರಾಶಿಯ ಬೆಲೆಯ ಗುಣಲಬ್ಧ ಅಂಶಕ್ಕೆ ಸಮ. . ಛೇದವು ಶೂನ್ಯವಾದಾಗ, ಆ ಭಿನ್ನರಾಶಿಯ ಅಂಶ ಏನೇ ಆಗಿದ್ದರೂ, ಛೇದ ಮತ್ತು ಭಿನ್ನರಾಶಿಯ ಬೆಲೆಯ ಗುಣಲಬ್ಧ ಶೂನ್ಯವೇ ಆಗಿರುತ್ತದೆ . . . ಇದು ವಿಪರ್ಯಾಸ. ಆದ್ದರಿಂದ ಯಾವುದೇ

ಭಿನ್ನರಾಶಿಯ ಛೇದ ಶೂನ್ಯವಾಗಿರಲು ಸಾಧ್ಯವಿಲ್ಲ. . . . ಅಂದರೆ, ಯಾವುದೇ ಸಂಖ್ಯೆಯನ್ನು ಸೊನ್ನೆಯಿಂದ ಭಾಗಿಸಲು ಸಾಧ್ಯವಿಲ್ಲ.

ಆಚಾರ್ಯ :– ಸರಿ, ಭಾಸ್ಕರ ನಿನ್ನ ಸಂದೇಹಕ್ಕೆ ಉತ್ತರ ಸಿಕ್ಕ್ತು ತಾನೇ.

ಭಾಸ್ಕರ :– *(ಎದ್ದುನಿಂತು, ಕೈ ಮುಗಿದು)* ನನ್ನ ಸಂದೇಹ, **ಭಿನ್ನರಾಶಿಯ ಛೇದವು ಶೂನ್ಯಕ್ಕೆ ಅತಿ ಸಮೀಪ ವಾದಾಗ ಆ ಭಿನ್ನರಾಶಿಯ ಬೆಲೆಯೇನು** ಅನ್ನೋದು.

ಗುರುಗಳು :– *(ಕೆಲ ಕಾಲ ಮೌನ, ನಂತರ)* ನೀನೇ ಯೋಚಿಸು. . . . ಇನ್ನು ಯಾವುದೇ ಸಂದೇಹವಿದ್ದರೂ ನಾಳೆಯದಿನ ಚರ್ಚಿಸೋಣ.

**– ತೆರೆ –**

## ಪ್ರವೇಶ – ೨

*(ಸೂತ್ರಧಾರ ಮತ್ತು ಗೆಳತಿಯ ಪ್ರವೇಶ)*

ಸೂತ್ರಧಾರ :– ಇದೇ ಸಮಸ್ಯೆ, ರಾಮಾನುಜರನ್ನೂ ಕಾಡಿತ್ತು.

ಗೆಳತಿ :– ಯಾರು, . . . ವಿಶಿಷ್ಟಾದ್ವೈತ ಸಿದ್ಧಾಂತಿ ಶ್ರೀ ರಾಮಾನುಜಾಚಾರ್ಯರನ್ನೇ ?

ಸೂತ್ರಧಾರ ;– ಅವರನ್ನಲ್ಲ, . . . ರಾಯಲ್ ಸೊಸೈಟಿಯ ಗಣ್ಯ ಸದಸ್ಯ, ಇಪ್ಪತ್ತನೇ ಶತಮಾನದ ಗಣಿತಕೌತುಕ, ಮೇಧಾವಿ ಡಾ. ಶ್ರೀನಿವಾಸ ರಾಮಾನುಜನ್ನರನ್ನ . . . ಅವರು ಪ್ರಾಥಮಿಕ ಶಾಲೆಯಲ್ಲಿದ್ದಾಗಲೇ ಅವರ ಗುರುಗಳು ಕೇಳಿದ ಪ್ರಶ್ನೆ ಹನ್ನೆರಡು ಮಾವಿನಹಣ್ಣುಗಳನ್ನು ನಾಲ್ಕು ಜನಕ್ಕೆ ಹಂಚಿದರೆ ಪ್ರತಿಯೊಬ್ಬರಿಗೂ ಬರುವ ಹಣ್ಣೆಷ್ಟು. ಅದಕ್ಕೆ, ರಾಮಾನುಜನ್ "ಹನ್ನೆರಡು ಹಣ್ಣುಗಳನ್ನ ಯಾರಿಗೂ ಹಂಚದೇ ಇದ್ದರೆ ಪ್ರತಿಯೊಬ್ಬರಿಗೂ ಬರುವ ಹಣ್ಣೆಷ್ಟು" ಅಂತ, ಗುರುಗಳನ್ನೇ ಕೇಳಿದರಂತೆ!

ಗೆಳತಿ :– *(ನಗುತ್ತ)* ಗುರುಗಳಿಂದ ಚೆನ್ನಾಗಿ ಒದೇ ತಿಂದಿರಬೇಕು.

ಸೂತ್ರಧಾರ :– *(ನಗುತ್ತಾ)* ಗುರುಗಳಂತೂ ಕಕ್ಕಾವಿಕ್ಕಿ ಆದ್ರಂತೆ. . . . ಆದರೆ, ಆಚಾರ್ಯರು ಕಿರಿಯ ಭಾಸ್ಕರನನ್ನೇ ಉತ್ತರ ಯೋಚಿಸಲು ತಿಳಿಸಿದರು. ಕಿರಿಯ ಭಾಸ್ಕರ ಶಾಲೆಯಲ್ಲಿ ಕುಳಿತಿದ್ದಾನೆ. ಏನು ಯೋಚಿಸಿದ್ದಾನೋ ಕೇಳೋಣ, ಬನ್ನಿ.

**ತೆರೆ**

## ದೃಶ್ಯ – ೨

*(ಆಶ್ರಮದ ಬೋಧನಾಸ್ಥಳ. ಕಿರಿಯ ಭಾಸ್ಕರ ಕೊಳದಸಮೀಪದ ಹಾಸಿನಮೇಲೆ ಕುಳಿತು ಏಕಾಗ್ರತೆಯಿಂದ ಬರೆಯುತ್ತಿದ್ದಾನೆ. ಸಾಯನ ಮತ್ತು ಉಳಿದ ಎಲ್ಲಾ ವಿದ್ಯಾರ್ಥಿಗಳೂ ಒಬ್ಬೊಬ್ಬರಾಗಿ ಬಂದು ಕುಳಿತುಕೊಳ್ಳುತ್ತಾರೆ. ಭಾಸ್ಕರ ಬರೆಯುವುದನ್ನು ಮುಗಿಸಿ ಸಾಯನನನ್ನು ನೋಡುತ್ತಾನೆ)*

ಸಾಯನ :– ಏನನ್ನೋ ಏಕಾಗ್ರತೆಯಿಂದ ಬರೀತಿದ್ದಿ. . . . ನಾನೂ ನೋಡಬಹುದಾ ?

ಭಾಸ್ಕರ :– *(ತಾಳೇಗರಿಯನ್ನು ಕೊಡುತ್ತಾ)* ಇದನ್ನ ಓದಿ ನಿನ್ನ ಅಭಿಪ್ರಾಯ ಹೇಳು.

ಸಾಯನ :– *(ಗಟ್ಟಿಯಾಗಿ ಓದುವನು)* ***ಖಹರಸ್ಯಾತ್ ಖ ಭಾಜಕೋ ರಾಶಿಃ*** *(ಎಲ್ಲರೂ ಕುತೂಹಲದಿಂದ ಕೇಳುತ್ತಿರುವರು)* ಭಾಸ್ಕರ ಇದೇನು ***ಖಹರಸ್ಯಾತ್ ಖ ಭಾಜಕೋ ರಾಶಿಃ****(ಎಲ್ಲರೂ ಮುಸಿಮುಸಿ ನಗುವರು)*

ಲಾಂಗೂಲ :– *(ಮೂದಲಿಕೆಯ ನಗು)ಖಹರಸ್ಯಾತ್ ಖ ಭಾಜಕೋ ರಾಶಿಃ, **ಸೊನ್ನೆಯಿಂದ ಭಾಗಿಸಿದಾಗ ಬರುವ ಲಬ್ಧ ಸೊನ್ನೆಯೇ ಭಾಜಕವಾಗಿರೊ ಭಿನ್ನರಾಶಿ*** . . . ಎಂತಹ ಅನ್ವೇಷಣೆ ! . . . *(ಎಲ್ಲರೂ ನಗುವರು)*

*(ಸಾಯನನು ಏಕಾಗ್ರತೆಯಿಂದ ಭಾಸ್ಕರನು ಕೊಟ್ಟ ತಾಳೇಗರಿಯನ್ನು ಓದುತ್ತಿರುವನು. ಗುರುಗಳ ಆಗಮನ. ಎಲ್ಲರು ಸುಮ್ಮನಾಗಿ ಬೇಗನೇ ಎದ್ದುನಿಂತು, ಪ್ರವರಹೇಳಿ, ನಿಂತಲ್ಲೇ ಬಾಗಿ ನಮಸ್ಕರಿಸುವರು.)*

ಗುರುಗಳು :– ಆಯುಷ್ಮಾನ್ ಭವ, . . . ಸಕಲ ವಿದ್ಯಾಭಿವೃದ್ಧಿರಸ್ತು . . . ಸಕಲಾಭೀಷ್ಟ ಸಿದ್ಧಿರಸ್ತು . . .
*(ಗುರುಗಳು ಕುಳಿತಮೇಲೆ ಎಲ್ಲರೂ ಕುಳಿತುಕೊಳ್ಳುವರು)*
ಲಾಂಗೂಲ, ಏನನ್ನೋ ಹೇಳಿ ಎಲ್ಲರನ್ನೂ ನಗಿಸುತ್ತಿದ್ದೆಯಲ್ಲಾ, ಏನದು ?

**ಮುತ್ತಿನಮಣಿ**

[ಎರಡನೇ ಭಾಸ್ಕರಾಚಾರ್ಯರ ಜೀವನ ಮತ್ತು ಕೃತಿಗಳನ್ನು ಪರಿಚಯಿಸುವ ಕಿರು ನಾಟಕ]

ಲಾಂಗೂಲ :– *(ಎದ್ದುನಿಂತು)* ***ಖಹರಸ್ಯಾತ್ ಖ ಭಾಜಕೋ ರಾಶಿಃ, ಸೊನ್ನೆಯಿಂದ ಭಾಗಿಸಿದಾಗ ಬರುವ ಲಬ್ಧ ಸೊನ್ನೆಯೇ ಭಾಜಕವಾಗಿರೊ ಭಿನ್ನರಾಶಿ***ಅಂತ ಬರೆದಿದಾನೆ ಭಾಸ್ಕರ. ಅದಕ್ಕೇ ನಗುಬಂತು ಗುರುಗಳೇ *(ಹುಸಿ ನಗು).*

ಗುರುಗಳು :– ಹೀಗೆ ಹೇಳೋದು ನಿನಗೇ ಸರಿ ಅನ್ನಿಸುತ್ತಾ ಭಾಸ್ಕರಾ ?

ಭಾಸ್ಕರ :– *(ಎದ್ದುನಿಂತು)* ***ಸೊನ್ನೆಯೇ ಭಾಜಕವಾಗಿರೋ ಭಿನ್ನರಾಶಿ ಒಂದು ಸಂಖ್ಯಾಸೂಚಕ*** ಅಷ್ಟೆ, . . . ಆದರೆ ***ಆ ಭಿನ್ನರಾಶಿಯ ಬೆಲೆ ಅನಂತ, ಅನಿರ್ದಿಷ್ಟ.***

ಗುರುಗಳು :– *(ಯೋಚಿಸುತ್ತಾ)* ಸೊನ್ನೆಯೇ ಭಾಜಕವಾಗಿರೋ ಭಿನ್ನರಾಶಿಯ ಬೆಲೆ ಅನಂತವೇ ! . . . ಅದು ಹೇಗೆ ಭಾಸ್ಕರಾ ?

ಭಾಸ್ಕರ :– ಯಾವುದೇ ಭಿನ್ನರಾಶಿಯ ಛೇದ ಅಂದರೆ ಆ ಭಿನ್ನರಾಶಿಯ ಭಾಜಕದ ಬೆಲೆ ಕಡಿಮೆಯಾದಂತೆಲ್ಲಾ, ಆ ಭಿನ್ನರಾಶಿಯಬೆಲೆ ಹೆಚ್ಚಾಗುತ್ತಾಹೋಗುತ್ತದೆ ಅಲ್ಲವೇ, ಆಚಾರ್ಯ ? *(ಗುರುಗಳು ಯೋಚನಾ ಮಗ್ನರಾಗುವರು)*

ಲಾಂಗೂಲ :– *(ಮುಸಿಮುಸಿ ನಗುತ್ತಾ)* ನಮಗೂ ಅರ್ಥವಾಗೋ ಹಾಗೆ ಹೇಳು ಭಾಸ್ಕರ.

ಭಾಸ್ಕರ :– *(ತಾಳ್ಮೆಯಿಂದ)* ಹಾಗೇ ಆಗಲಿ, . . . ಹದಿನಾರನ್ನ ಹದಿನಾರರಿಂದಲೇ ಭಾಗಿಸಿದರೆ ಬರೋ ಭಾಗಲಬ್ಧ ಎಷ್ಟು ?

ಲಾಂಗೂಲ :– ಒಂದು. . . . ಇಷ್ಟೂ ಗೊತ್ತಿಲ್ಲ ಅಂದ್ಕೊಂಡ್ಯಾ ? *(ಮುನಿಸು)*

ಭಾಸ್ಕರ :– ತಪ್ಪು ತಿಳೀಬೇಡ. . . . ಹದಿನಾರನ್ನ ಎರಡರಿಂದ ಭಾಗಿಸಿದಾಗ ಬರೋ ಲಬ್ಧಿ ಎಷ್ಟು ?

ಕೇಶವ :– ಎಂಟು, . . . *(ಸಿಟ್ಟು)* ನಮಗೆಲ್ಲಾ ಭಾಗಾಹಾರ ಬರೋಲ್ಲಾ ಅಂದ್ಕೊಂಡಿದೀಯೋ ಹೇಗೆ ?

ಭಾಸ್ಕರ :– ನೀನೂ ತಪ್ಪು ತಿಳ್ಕೋತಿದೀಯಾ. ಹದಿನಾರನ್ನ ಒಂದುಕೋಟಿಯಲ್ಲಿನ ಒಂದುಭಾಗವಿರುವ ಭಿನ್ನರಾಶಿಯಿಂದ ಭಾಗಿಸಿದಾಗ ಬರುವ ಲಬ್ಧಿ ಎಷ್ಟು ?

ಸಾಯನ :–*(ಕೇಶವ ಸುಮ್ಮನಿರಲು)* ಹದಿನಾರನ್ನ ಒಂದುಕೋಟಿಯಲ್ಲಿನ ಒಂದು ಭಾಗವಿರುವ ಭಿನ್ನರಾಶಿಯಿಂದ ಭಾಗಿಸಿದಾಗ ಬರುವ ಲಬ್ಧಿ ಹದಿನಾರುಕೋಟಿ. ಆದರೆ, . . . ಈ ನಿನ್ನ ಪ್ರಶ್ನೆಗಳಿಗೂ ಸೊನ್ನೆಯೇ ಭಾಜಕವಾಗಿರೋ ಭಿನ್ನರಾಶಿಯ ಬೆಲೆಗೂ ಏನು ಸಂಬಂಧ ?

ಭಾಸ್ಕರ :– ಅದು ನಿನಗೇ ಗೊತ್ತಾಗುತ್ತೆ, . . . ಇನ್ನು ಒಂದೇ ಒಂದು ಪ್ರಶ್ನೆ, . . . ಸೊನ್ನೆಯು ಹತ್ತುಸಹಸ್ರ ಕೋಟಿಯಲ್ಲಿನ ಒಂದುಭಾಗಕ್ಕಿಂತ ಹೆಚ್ಚೋ ಕಡಿಮೇನೋ ?

ಲಾಗೂಲ :– *(ನಗುತ್ತಾ)* ಸೊನ್ನೇನೇ ಕಡಿಮೆ. . . . ಇಷ್ಟೂ ಗೊತ್ತಿಲ್ವೇ ?

ಗುರುಗಳು :– *(ಆಸಕ್ತಿಯಿಂದ ಆಲಿಸುತ್ತಿದ್ದವರು)* ಅದು ಹೇಗೆ ಲಾಂಗೂಲಾ ?

ಲಾಂಗೂಲ :– *(ಎದ್ದುನಿಂತು)* ಒಂದು ಅತ್ಯಂತ ದೊಡ್ಡವಸ್ತುವನ್ನ ಹತ್ತುಸಹಸ್ರಕೋಟಿ ಸಮಭಾಗಗಳನ್ನಾಗಿ ಮಾಡಲು ಸಾಧ್ಯವಾದರೆ, ಅವುಗಳ ಒಂದುಭಾಗ ಶೂನ್ಯವಂತೂ ಅಲ್ಲ, ಅಲ್ವೇ ಗುರುಗಳೇ ?

ಗುರುಗಳು :– *(ಮೆಚ್ಚುಗೆಯಿಂದ)* ಸರಿಯಾಗಿ ಹೇಳಿದೆ, ಲಾಂಗೂಲ. ಹಾಗಾದ್ರೆ ಭಾಸ್ಕರ, ನಿನ್ನ ಅಭಿಪ್ರಾಯಾ!

ಭಾಸ್ಕರ :– ಸೊನ್ನೆಯು ಯಾವುದೇ ಭಿನ್ನರಾಶಿಯ ಛೇದವಾದಾಗ, ಸೊನ್ನೆಯ ಛೇದ ಅಂದರೆ . . . ಸೊನ್ನೆಯಭಾಜಕ, ಅತಿ ದೊಡ್ಡ ಸಂಖ್ಯೆಗಿಂತಲೂ ಅತಿದೊಡ್ಡ ಸಂಖ್ಯೆಯಾಗಿರಬೇಕು . . . ಅಂದರೆ, ಸೊನ್ನೆಯ ಛೇದ ಅಥವಾ ಭಾಜಕ ಅನಂತ, ಅಪರಿಮಿತ, . . . ಆದ್ದರಿಂದಲೇ, ಸೊನ್ನೆಯೇ ಛೇದ ಅಥವಾ ಭಾಜಕವಾಗಿರೋ ರಾಶಿಯ ಬೆಲೆ, ಅನಂತ, ಅಪರಿಮಿತ.

*(ಗುರುಗಳು ಮೆಚ್ಚುಗೆಯಿಂದ ತಲೆದೂಗುತ್ತಿರುವಾಗ, ಉಳಿದವರು ಬೆರಗಾಗಿ ನೋಡುತ್ತಿರುವರು)*

ಗುರುಗಳು :– ಅಲ್ಲ, . . . ಎಲ್ಲರೂ ***ಹಿಂದಿನವರು ಹೇಳಿದ್ದೇ ವೇದವಾಕ್ಯ, ಅದನ್ನ ಪ್ರಶ್ನಿಸಲೇಬಾರದು*** ಅಂತ ಸುಮ್ಮನಿದ್ದರೆ, ***ಜ್ಞಾನದ ಬೆಳವಣಿಗೆ ಆಗೋದಾದ್ರೂ ಹೇಗೆ*** ? . . . ಭಾಸ್ಕರ, ಸೊನ್ನೆಯು ಭಾಜಕವಾಗಿರೋ ಭಿನ್ನರಾಶಿಯಬೆಲೆಯ ಮೇಲೆ ಮೂಲಪರಿಕರ್ಮಗಳ ಪರಿಣಾಮವೇನು? ಯೋಚಿಸಿದ್ದೀಯ.

ಸಾಯನ :– *(ಎದ್ದುನಿಂತು ಭಾಸ್ಕರನ ತಾಳೇಗರಿಯನ್ನು ತೋರಿಸುತ್ತಾ, ಉದ್ವೇಗದಿಂದ)* ಇದರಲ್ಲಿ, ಅದರ ವಿಷಯವೇ ಇದೆ, ಗುರುಗಳೆ. . . . ಭಾಸ್ಕರ ಒಂದು ಗಣಿತಕವನಾನೇ ಬರೆದಿದಾನೆ. ಇದನ್ನ ಹಾಡಿದರೆ ಚೆನ್ನಾಗಿರುತ್ತೆ. *(ಗುರುಗಳು ಸಮ್ಮತಿಸುವರು).* ಹಾಡು ಭಾಸ್ಕರಾ.

ಗುರುಗಳು :– *(ಅಭಿಮಾನದಿಂದ)* ಹಾಡು ಭಾಸ್ಕರ.

**ಮುತ್ತಿನಮಣಿ**

[ಎರಡನೇ ಭಾಸ್ಕರಾಚಾರ್ಯರ ಜೀವನ ಮತ್ತು ಕೃತಿಗಳನ್ನು ಪರಿಚಯಿಸುವ ಕಿರು ನಾಟಕ]

ಭಾಸ್ಕರ :– *(ರಾಗವಾಗಿ ಹಾಡುವನು)*

**ಅಸ್ಮಿನ್ ವಿಕಾರಃ ಖಹರೇಣರಾಶ್ಯಾವಪಿ ಪ್ರವಿಷ್ಟೇಶ್ವಪಿ ನಿಃಸೃತೇಷು**

**ಬಹುಷ್ವಪಿಸ್ಯಾಲ್ಲಯಸೃಷ್ಟಿಕಾಲೇಽನಂತೇಽಚ್ಯುತೇ ಭೂತಗಣೇಷು ಯದ್ವತ್ !**

ಗುರುಗಳು :– *(ಆನಂದದಿಂದ)* ಆಹಾ . . . ಆಹಾ . . . ಎಂತಹ ಉಪಮೆ . . . *(ಭಾವಪರವಶರಾಗಿ)* . . ***ಪ್ರಳಯಕಾಲದಲ್ಲಿ ಅನೇಕಾನೇಕ ಜೀವರಾಶಿಗಳು ಭೂತಗಣಗಳು ಅನಂತನಾದ ಭಗವಂತನಲ್ಲಿ ಐಕ್ಯವಾದರೂ, ಸೃಷ್ಟಿಸಮಯದಲ್ಲಿ ಅವುಗಳು ಅವನಿಂದ ಹೊರಹೊಮ್ಮಿದರೂ, ಹೇಗೆ ಅನಂತನಾದ ಭಗವಂತನಲ್ಲಿ ಯಾವ ಪರಿಣಾಮವೂ ಇರುವುದಿಲ್ಲವೋ, ಹಾಗೆಯೇ ಎಷ್ಟೇ ದೊಡ್ಡಸಂಖ್ಯೆಯನ್ನು ಶೂನ್ಯವು ಭಾಜಕವಾಗಿರೋ ರಾಶಿಗೆ ಕೂಡಿದರೂ ಅಥವಾ ಅದರಿಂದ ಕಳೆದರೂ, ಅದರಬೆಲೆಯಲ್ಲಿ ಯಾವಬದಲಾವಣೆಯೂ ಇರುವುದಿಲ್ಲ.*** *(ಉದ್ವೇಗದಿಂದ)* ಭಾಸ್ಕರ, ನಿನ್ನಂಥವರ ಪ್ರಯತ್ನದಿಂದಲೇ ಜ್ಞಾನದ ಬೆಳವಣಿಗೆ ಸಾಧ್ಯ. . . . ನಿನ್ನ ಈ ಪ್ರಯತ್ನಾನ ಮುಂದುವರಿಸು. ಹಾಗೆಯೇ ಶುಷ್ಕ ಗಣಿತಸೂತ್ರಗಳು ಮತ್ತು ಸಮಸ್ಯೆಗಳನ್ನು ಸುಂದರ ಕವನಗಳ ರೂಪದಲ್ಲಿ ತಿಳಿಸು. . . . ನಿನ್ನ ಈ ಪ್ರಯತ್ನ ಯಶಸ್ವಿಯಾಗಲಿ. ಸಕಲಾಭೀಷ್ಟಸಿದ್ಧಿರಸ್ತು.

**ತೆರೆ**

**ಪ್ರವೇಶ – ೩**

*(ಸೂತ್ರಧಾರ ಮತ್ತು ಗೆಳತಿಯ ಪ್ರವೇಶ)*

ಗೆಳತಿ :– ***ಸೊನ್ನೆಯು ಛೇದದಲ್ಲಿರೋ ಭಿನ್ನರಾಶಿಯ ಬೆಲೆ ಅನಂತ, ಅಪರಿಮಿತ. ಅದಕ್ಕೆ ಅತಿದೊಡ್ಡ ಸಂಖ್ಯೆಯನ್ನ ಕೂಡಿದರೂ ಅಥವಾ ಅದರಿಂದ ಕಳೆದರೂ ಅದರ ಬೆಲೆಯಲ್ಲಿ ಯಾವ ವ್ಯತ್ಯಾಸವೂ ಆಗುವುದಿಲ್ಲ*** ಅನ್ನೋ ಈ ಭಾಸ್ಕರಾಚಾರ್ಯರ ಹೇಳಿಕೆ, ***ಆಧುನಿಕ ಗಣಿತದ ಚಲನಕಲನಕ್ಕೆ ಅತಿ ಅವಶ್ಯಕವಾದ ಮಿತಿ ಎಂಬ ಸಿದ್ಧಾಂತಕ್ಕೆ ಅತಿ ಸಮೀಪ ಆದ್ದರಿಂದ ಮಿತಿ ಎಂಬ ಸಿದ್ಧಾಂತಕ್ಕೆ ಅಂಕುರಾರ್ಪಣ ಹಾಕಿದ ಶ್ರೇಯಸ್ಸು ಭಾಸ್ಕರಾಚಾರ್ಯರಿಗೇ ಸಲ್ಲಬೇಕು.***

ಸೂತ್ರಧಾರ :– ನಿಮ್ಮ ಈ ಅಭಿಪ್ರಾಯಾನಾ ಅನೇಕರು ತಿಳಿಸಿದ್ದಾರೆ. . . ಭಾಸ್ಕರಾಚಾರ್ಯರು, ಗುರುಗಳ ಆದೇಶದಂತೆ ಗಣಿತಸೂತ್ರಗಳು ಮತ್ತು ಸಮಸ್ಯೆಗಳನ್ನು ಲಯಬದ್ಧ ಕವನಗಳ ರೂಪದಲ್ಲಿ ನಿರೂಪಿಸುವ ನೈಪುಣ್ಯತೆಯನ್ನು ಗಳಿಸಿದರು. ಅವರು ಕವಿರ್ಭಾಸ್ಕರಎಂದು ಪ್ರಸಿದ್ಧರಾದರು. ಉತ್ತಮ ಖಗೋಳಜ್ಞ ಎಂಬ ಗೌರವಕ್ಕೂ ಪಾತ್ರರಾದರು.

ಗೆಳತಿ :– ಖಗೋಳಶಾಸ್ತ್ರ ಹಾಗೂ ಅನೇಕ ಶಾಸ್ತ್ರಗಳ ಬೆಳವಣಿಗೆಗೆ ಪ್ರಾಚೀನ ಶಾಸ್ತ್ರಜ್ಞರ ಕೊಡುಗೆ ಅಪಾರ. ಭಾಸ್ಕರಾಚಾರ್ಯರು ಹಿಂದಿನವರ ಸಿದ್ಧಾಂತಗಳನ್ನು ಕ್ರೋಢೀಕರಿಸಿ ಅವುಗಳನ್ನು ಪರಿಷ್ಕರಿಸಿದರು. ಹಿಂದಿನವರು ತಿಳಿಸಿದ್ದ ಗಣಿತಸೂತ್ರಗಳನ್ನು ಸರಳಗೊಳಿಸಿ, ವಿದ್ಯಾರ್ಥಿಗಳ ಉಪಯೋಗಕ್ಕೆಂದು ಅಂಕಗಣಿತ, ಕ್ಷೇತ್ರಗಣಿತ ಹಾಗೂ ಬೀಜಗಣಿತದ ಸೂತ್ರಗಳು ಮತ್ತು ಸಮಸ್ಯೆಗಳನ್ನು ಸಂಗ್ರಹಿಸಿದರು.

ಸೂತ್ರಧಾರ :– ಇವುಗಳಲ್ಲಿರುವ ಸಮಸ್ಯೆಗಳು, ಅಂದಿನ ಪರಿಸರ ಮತ್ತು ನಂಬಿಕೆಗಳ ಆಧಾರಿತವಾಗಿದ್ದು ಅವರ ಗ್ರಂಥಗಳು ಉತ್ತಮ ಪಠ್ಯಪುಸ್ತಕದಲ್ಲಿರಬೇಕಾದ ಎಲ್ಲಾ ರೂಪುರೇಷೆಗಳನ್ನೂ ಹೊಂದಿವೆ. ಅವರು ಚಿಕ್ಕವಯಸ್ಸಿನಲ್ಲಿಯೇ ಉಜ್ಜಯನಿಯ ಖಗೋಳ ವೀಕ್ಷಣಾಲಯದ ಅಧ್ಯಕ್ಷರಾಗಿ ನೇಮಕಗೊಂಡರು.

ಗೆಳತಿ :– ಭಾಸ್ಕರಾಚಾರ್ಯರ ಮನೆಯಲ್ಲಿ ಎಲ್ಲರೂ ಆತಂಕಗೊಂಡಂತಿದೆ. ಬನ್ನಿ, ನೋಡೋಣ.

**ತೆರೆ**

**ಮುತ್ತಿನಮಣಿ**

[ಎರಡನೇ ಭಾಸ್ಕರಾಚಾರ್ಯರ ಜೀವನ ಮತ್ತು ಕೃತಿಗಳನ್ನು ಪರಿಚಯಿಸುವ ಕಿರು ನಾಟಕ]

**ದೃಶ್ಯ – ೩**

*(ಇಪ್ಪತ್ತೆರಡು ವರ್ಷದ ಭಾಸ್ಕರಾಚಾರ್ಯರು ಮನೆಯ ಅಂಗಳದಲ್ಲಿ ಆತಂಕದಿಂದ ಅತ್ತಿಂದಿತ್ತ ನಿಧಾನವಾಗಿ ಅಡಿಯಿಡುತ್ತಿದ್ದಾರೆ. ಅವರ ತಂದೆ ಮಹೇಶ್ವರರ ಆಗಮನ.)*

ಮಹೇಶ್ವರ :– ಮಗೂ, ರಾಜಜ್ಯೋತಿಷಿಗಳು ಇನ್ನೂ ಬರಲಿಲ್ಲವೇ ? ಆಗಲೇ ಹೇಳಿಕಳಿಸಿದೆಯಲ್ಲಾ. . . . ಏಕಿಷ್ಟು ತಡ ?

ಭಾಸ್ಕರ :– ನನಗೂ ಅದೇ ಆತಂಕ. . . . ನಾನೇ ಹೋಗಿಬರುತ್ತೇನೆ. *(ಹೊರಡಲು ಅನುವಾಗುವರು )*

ಮಹೇಶ್ವರ :– ನೀನೇನೂ ಹೋಗಬೇಡ . . . ಪ್ರಸವದ ಸಮಯ ಸಮೀಪಿಸ್ತಿದೆ. *(ಹೊರಗಡೆಯ ಸದ್ದನ್ನು ಆಲಿಸಿ)* ಯಾರೋ ಬಂದಂತಿದೆ.

*(ಭಾಸ್ಕರಾಚಾರ್ಯರು ಹೊರಗೆ ಹೋಗುವರು. ಕೆಲವು ಸಮಯದ ನಂತರ ಇಬ್ಬರು ಜ್ಯೋತಿಷಿಗಳೊಡನೆ ಒಳಗೆ ಬರುವರು.)*

ಮಹೇಶ್ವರ :– *(ಆದರದಿಂದ ಕೈ ಹಿಡಿದು ಸ್ವಾಗತಿಸುತ್ತಾ)* ದಯಮಾಡಿಸಬೇಕು, . . ದಯಮಾಡಿಸಬೇಕು. *(ಕುಳಿತುಕೊಳ್ಳುವ ಆಸನದ ಕಡೆ ಕರೆದೊಯ್ಯುವರು. ಜ್ಯೋತಿಷಿಗಳಿಬ್ಬರೂ ಸಂಪ್ರದಾಯದಂತೆ ತಮ್ಮ ಕಿವಿಗಳನ್ನು ಹಿಡಿದು ಪ್ರವರ ಹೇಳುತ್ತಾ ಬಾಗಿ ಮಹೇಶ್ವರರ ಪಾದಗಳನ್ನು ಮುಟ್ಟಿ ನಮಸ್ಕರಿಸುವರು)* ಮಹೇಶ್ವರ :– ಆಯುಷ್ಮಾನ್ ಭವ . . . ದಯಮಾಡಿ ಆಸೀನರಾಗಿರಿ *(ಎಲ್ಲರೂ ಕುಳಿತ ನಂತರ)*

ನಂಜುಂಡದೀಕ್ಷಿತರೇ, ಪ್ರಾಣೇಶಾಚಾರ್ಯರೇ, ನನ್ನ ಸೊಸೆಗೆ ಪ್ರಸವದಕಾಲ ಸನ್ನಿಹಿತವಾಗಿದೆ. *(ಸಂತೋಷದಿಂದ)* ನಮ್ಮ ಭಾಸ್ಕರ ತಂದೆಯಾಗಲಿದ್ದಾನೆ. ದಯಮಾಡಿ ತಾವು, ನವಜಾತಶಿಶುವಿನ ಮೊದಲ ಅಳುವಿನ ಆಧಾರದ ಮೇಲೆ, ಜನಿಸುವ ಮಗುವಿನ ಜಾತಕ ಗಣಿಸಿಕೊಡಬೇಕು. ಇದೇ ತಮ್ಮಲ್ಲಿ ನನ್ನ ಕೋರಿಕೆ.

ದೀಕ್ಷಿತರು :– ದೊಡ್ಡಮಾತು . . . ದೊಡ್ಡಮಾತು . . . ತಾವು ದೊಡ್ಡವರು, . . . ಹೀಗೇ . . .

ಪ್ರಾಣೇಶ :– ಇದು ತಮ್ಮ ಆಜ್ಞೆ, . . . ಕೋರಿಕೆ ಅಲ್ಲ. . . . ಆದರೂ . . .

ಮಹೇಶ್ವರ :– ಏನಾದರೂ ಸಂದೇಹವೇ ?

ಪ್ರಾಣೇಶ :– ತಾವು, ತಂದೆ ಮಕ್ಕಳಿಬ್ಬರೂ ಪ್ರಚಂಡ ಜ್ಯೋತಿಷಿಗಳು, . . . ಹೀಗಿದ್ದರೂ . . .

ದೀಕ್ಷಿತರು :– ತಮ್ಮ ಶಿಶುವಿನ ಜಾತಕಫಲ ಗಣಿಸಲು . . .

ಫ್ರಾಣೇಶ :– ನಾವು ಅರ್ಹರೆ, ಅನ್ನೋ ಅಂಜಿಕೆ ಅಷ್ಟೆ.

ಮಹೇಶ್ವರ :– ಹಾಗೆಂದರೇನು ? . . . ರಾಜಜ್ಯೋತಿಷಿಗಳಿಗೆ ಈ ಅಂಜಿಕೆ ಭೂಷಣವಲ್ಲ. . . . ತಮ್ಮ ಪಾಂಡಿತ್ಯ ಲೋಕಪ್ರಸಿದ್ಧ. . . . ದಯಮಾಡಿ ನನ್ನ ಕೋರಿಕೆ ಯನ್ನು ಅನುಮೋದಿಸಿ.

ದೀಕ್ಷಿತರು :– ತಮ್ಮ ಚಿತ್ತ . . . ತಮ್ಮ ಅಶೀರ್ವಾದವೇ ನಮ್ಮ ಭಾಗ್ಯ.

ಪ್ರಾಣೇಶ :– ನಾವು ತಡವಾಗಿ ಬಂದುದಕ್ಕೆ ದಯವಿಟ್ಟು ಕ್ಷಮಿಸಿ . . . ಆಳುವ ಅರಸರಿಂದ ಕರೆ ಬಂದಿತ್ತು. ಅಲ್ಲಿಗೆ ಹೋಗಿ ನೇರವಾಗಿ ಇಲ್ಲಿಗೇ ಬರುತ್ತಿದ್ದೇವೆ.

ದೀಕ್ಷಿತರು :– ಭಾಸ್ಕರಾಚಾರ್ಯರೇ, ಆಳುವ ಅರಸರನ್ನು ತಾವು ಆದಷ್ಟು ಬೇಗನೇ ಕಾಣಬೇಕಂತೆ.

ಭಾಸ್ಕರ :– ಹೌದೇ, ಇದೋ ಹೊರಟೆ. . . . *(ಹೊರಡಲು ಸಿದ್ಧರಾಗಿ)* ಅಪ್ಪಾಜಿ . . .

*(ಅಷ್ಟರಲ್ಲಿ ನವಜಾತಶಿಶುವಿನ ಅಳುವಿನ ಧ್ವನಿ. ತಕ್ಷಣವೇ ಜ್ಯೋತಿಷಿಗಳು ಕವಡೆಗಳನ್ನು ಉರುಳಿಸಿ, ಎಣಿಸಿ, ತಂದಿದ್ದ ತಾಳಪತ್ರವನ್ನು ಓದಿ, ಮತ್ತೆ ಗಣಿಸುವುದರಲ್ಲಿ ಮಗ್ನರಾಗಿರುವರು. ಭಾಸ್ಕರಾಚಾರ್ಯ, ಮಹೇಶ್ವರರು ಅವರನ್ನೇ ಗಮನಿಸುತ್ತಿರುವರು)*

ಫ್ರಾಣೇಶ :– ನವಜಾತ ಶಿಶು, ಮಹಾಲಕ್ಷ್ಮಿ. . . .

*(ಮಹೇಶ್ವರರ ಮುಖದಲ್ಲಿ ಮ್ಲಾನತೆ. ಭಾಸ್ಕರಾಚಾರ್ಯರು ಆನಂದದಿಂದ ನೋಡುತ್ತಿದ್ದ ಹಾಗೇ ದಾಸಿಯಪ್ರವೇಶ)*

ದಾಸಿ :– ಒಡೆಯಾ, ಒಡತಿ ಹೆಣ್ಣುಮಗುವಿನ ತಾಯಿಯಾದರು. ಮಗು ಬಾಣಂತಿ ಆರೋಗ್ಯವಾಗಿದ್ದಾರೆ.

ಭಾಸ್ಕರ :– *(ಆನಂದದಿಂದ ಬೆರಳಿನಲ್ಲಿದ್ದ ಉಂಗುರ ಒಂದನ್ನು ದಾಸಿಗೆ ಕೊಡುತ್ತಾ)* ಸರಸ್ವತೀ ಉಪಾಸಕರ ಬಡ ಕುಟೀರಕ್ಕೆ ಮಹಾಲಕ್ಷ್ಮಿಯ ಆಗಮನ. . . . ಎಲ್ಲಾ ಆಕೆಯಕೃಪೆ . . .

*(ಜ್ಯೋತಿಷಿಗಳು ಜಾತಕಗಣಿಕೆಯನ್ನು ಮುಂದುವರಿಸುವರು. ಕೆಲಸಮಯದ ನಂತರ ನಿಧಾನವಾಗಿ ಎದ್ದುನಿಂತು)*

ದೀಕ್ಷಿತರು :– ಹಿರಿಯರು ನಮ್ಮನ್ನು ಕ್ಷಮಿಸಬೇಕು. . . . ನಮ್ಮ ಫಲಶ್ರುತಿಯಲ್ಲಿ ಏನಾದರೂ . . . *(ಪ್ರಾಣೇಶಾಚರ್ಯರೂ ತಲೆಯಾಡಿಸಿ ಸಮ್ಮತಿಸುವರು)*

ಮಹೇಶ್ವರ :– ಹಾಗೆಂದರೆ ? . . . ಏನಿದ್ದರೂ ಸಂಕೋಚವಿಲ್ಲದೆ ತಿಳಿಸಿ. *(ಮುಖದಲ್ಲಿ ಆತಂಕ)*

ಪ್ರಾಣೇಶ :– ಜಾತಕಫಲದಂತೆ, ನವಜಾತಶಿಶು ಸಕಲವಿದ್ಯಾಪಾರಂಗತೆಯಾಗೋದರಲ್ಲಿ ಸಂದೇಹವೇ ಇಲ್ಲ.

## ಮುತ್ತಿನಮಣಿ

[ಎರಡನೇ ಭಾಸ್ಕರಾಚಾರ್ಯರ ಜೀವನ ಮತ್ತು ಕೃತಿಗಳನ್ನು ಪರಿಚಯಿಸುವ ಕಿರು ನಾಟಕ]

ಮಹೇಶ್ವರ :– *(ಆನಂದದಿಂದ)* ಇದನ್ನ ತಿಳಿಸೋಕೆ ಇಷ್ಟೊಂದು ಪೀಠಿಕೇನೇ. *(ಸಂಶಯ)* ಅಥವಾ . . . ಮತ್ತೇನಾದರೂ . . .

ದೀಕ್ಷಿತರು :– ನವಜಾತಶಿಶುವಿಗೆ, . . . ಚಿಕ್ಕವಯಸ್ಸಿನಲ್ಲೇ . . .

ಮಹೇಶ್ವರ :– *(ಕಾತುರತೆ)* ಚಿಕ್ಕವಯಸ್ಸಿನಲ್ಲೇ ! ? . . . ನಿಸ್ಸಂಕೋಚವಾಗಿ ಹೇಳಿ.

ಪ್ರಾಣೇಶ :– ವೈಧವ್ಯಯೋಗ.

*(ಇದನ್ನು ಕೇಳಿದ ಮಹೇಶ್ವರರು ಗರಬಡಿದವರಂತೆ ನಿಲ್ಲುವರು. ಜ್ಯೋತಿಷಿಗಳಿಬ್ಬರೂ ಅವರ ಆಸರೆಯಾಗಿ ನಿಲ್ಲುವರು)*

**ತೆರೆ**

### ಪ್ರವೇಶ – ೪

*(ಸೂತ್ರಧಾರ ಮತ್ತು ಗೆಳತಿಯ ಪ್ರವೇಶ)*

ಸೂತ್ರಧಾರ :– ಭಾಸ್ಕರಾಚಾರ್ಯರ ಮುದ್ದಿನ ಮಗಳು ಚೆಲುವೆ ಲೀಲಾವತಿಯು ಪ್ರತಿಭಾವಂತೆ. ಆದರ್ಶವಾದೀ ಭಾಸ್ಕರಾಚಾರ್ಯರು ಮುದ್ದಿನ ಮಗಳಿಗೆ ಗಣಿತ, ಮಹಾಕಾವ್ಯಗಳು, ಪುರಾಣ, ತತ್ತ್ವಶಾಸ್ತ್ರ ಮತ್ತು ಸಾಹಿತ್ಯ ಮೊದಲಾದುವುಗಳನ್ನು ತಾವೇ ಬೋಧಿಸುತ್ತಾರೆ.

ಗೆಳತಿ :– ಮಗಳ ಭವಿಷ್ಯ ಆಚಾರ್ಯರನ್ನು ಚಿಂತೆಗೆ ಗುರಿಮಾಡಿರಬೇಕು ಅಲ್ಲವೇ ?

ಸೂತ್ರಧಾರ :– ಮಾನವ ಎಷ್ಟೇ ಆದರ್ಶವಾದಿಯಾದರೂ, ತನಗೆ ಪ್ರಿಯರಾದವರಿಗೆ ಏನಾದರು ಆಗುವ ಸಂಶಯವಿದ್ದರೆ ಚಿಂತೆಗೆ ಬಲಿಯಾಗುವುದು ಸಹಜ. ಫಲಿತ ಜ್ಯೋತಿಷವನ್ನ, ಖಗೋಳ ಗಣಿತದ ಉಪಯುಕ್ತ ಅಂಗವಾಗಿ ನಂಬಿದ್ದ ಭಾಸ್ಕರಾಚಾರ್ಯರು ಮಗಳ ಭವಿಷ್ಯದ ಬಗೆಗೆ ದೀರ್ಘವಾಗಿ ಯೋಚಿಸಿ, ಕೊನೆಗೆ ಅವಳನ್ನು ಸಕಲವಿದ್ಯಾಪಾರಂಗತೆಯನ್ನಾಗಿಸಲು ನಿರ್ಧರಿಸಿದರು.

ಗೆಳತಿ :– ಹಾಗೆಂದರೆ, ಅವರ ಗಣಿತ ಸಂಶೋಧನೆಗಳು ?

ಸೂತ್ರಧಾರೆ :– ಗಣಿತ ಸಂಶೋಧನೆ, ಅವರಿಗೆ ಅತಿ ಪ್ರಿಯವಾದ ಹವ್ಯಾಸ. ಅದನ್ನ ಮರೀತಾರ್ಯೇ ? . . . ಸರಳ ಅನಿರ್ದಿಷ್ಟ ಸಮೀಕರಣಗಳಿಗೆ ಪೂರ್ಣಾಂಕಬೆಲೆಗಳನ್ನು ಪಡೆಯಲು ಕುಟ್ಟಕ ಹೆಸರಿನ ವಿಧಾನಾನ ಕ್ರಿ.ಶ. ಐದನೇ ಶತಮಾನದಲ್ಲೆ ಹಿರಿಯ ಆರ್ಯಭಟರು ಸಂಕ್ಷಿಪ್ತವಾಗಿ ತಿಳಿಸಿದ್ದರು. ಅನಂತರದ ಖಗೋಳಜ್ಞರಾದ ಕ್ರಿ.ಶ. ಏಳನೇ ಶತಮಾನದ ಮೊದಲನೇ ಭಾಸ್ಕರಾಚಾರ್ಯ, ಬ್ರಹ್ಮಗುಪ್ತ, ಒಂಭತ್ತನೇ ಶತಮಾನದ ಮಹಾವೀರಾಚಾರ್ಯ ಮುಂತಾದವರು ಕುಟ್ಟಕ ವಿಧಾನವನ್ನ ತಿಳಿಸಿದ್ದರೂ ಅವರ ವಿಧಾನಗಳಲ್ಲಿ ವ್ಯತ್ಯಾಸವಿದೆ.

ಗೆಳತಿ :– ವ್ಯತ್ಯಾಸಕ್ಕೆ ಕಾರಣ ?

ಸೂತ್ರಧಾರ :– ಒಂದು ಕಾರಣ, ಇವರೆಲ್ಲರೂ ಕುಟ್ಟಕವನ್ನು ಸ್ವಂತವಾಗಿ ಕಂಡುಹಿಡಿದಿರಬೇಕು. ಒಂದಂತೂ ನಿಸ್ಸಂಶಯ. ಭಾಸ್ಕರಾಚಾರ್ಯರ ವಿಧಾನ ಪರಿಪೂರ್ಣ.

ಸೂತ್ರಧಾರ :– ಭಾಸ್ಕರಾಚಾರ್ಯರು ಮುದ್ದಿನ ಮಗಳು ಲೀಲಾವತಿಗೆ ಪಾಠ ಹೇಳುತ್ತಿದ್ದಾರೆ, ನೋಡೋಣ ಬನ್ನಿ.

**ತೆರೆ**

### ದೃಶ್ಯ – ೪

*(ಭಾಸ್ಕರಾಚಾರ್ಯರ ವ್ಯಾಸಂಗಕೊಠಡಿ. ಮೂವತ್ತೈದು ವರ್ಷದ ಆಚಾರ್ಯರು ಹದಿಮೂರು ವರ್ಷದ ಲೀಲಾವತಿಗೆ ಪಾಠಹೇಳಿ ಮುಗಿಸುವುದರಲ್ಲಿದ್ದಾರೆ.)*

ಭಾಸ್ಕರಾಚಾರ್ಯ :– ಲೀಲಾವತಿ, ನಾಳೆ ಕರ್ಣ ಪಾರ್ಥರ ಅಂತಿಮ ಯುದ್ಧವನ್ನ ಚರ್ಚಿಸೋಣ. . . . ನಿನ್ನ ಅಭಿಪ್ರಾಯದಲ್ಲಿ ಮಹಾಭಾರತ ಮಹಾಕಾವ್ಯದ ನಾಯಕ ಯಾರು ?

ಲೀಲಾವತಿ :– ನನ್ನ ಅಭಿಪ್ರಾಯದಲ್ಲಿ ದಾನಶೂರ ಕರ್ಣ, ಮಹಾಭಾರತದ ನಾಯಕ, . . . ದುರಂತನಾಯಕ.

ಭಾಸ್ಕರಾಚಾರ್ಯ :– ಕಲಿಕರ್ಣ, ಮಹಾಭಾರತದ ದುರಂತನಾಯಕ ಅನ್ನೋದಕ್ಕೆ ನೀನು ಕೊಡುವ ಆಧಾರ ?

ಲೀಲಾವತಿ :– ರಾಜಕುಮಾರಿಯ ಮಗನಾದರೂ, ಅದರಲ್ಲೂ ಸೂರ್ಯದೇವನ ವರಪುತ್ರ ; ಆದರೂ,

**ಮುತ್ತಿನಮಣಿ**

[ಎರಡನೇ ಭಾಸ್ಕರಾಚಾರ್ಯರ ಜೀವನ ಮತ್ತು ಕೃತಿಗಳನ್ನು ಪರಿಚಯಿಸುವ ಕಿರು ನಾಟಕ]

ದಾಸೀಕುವರ, ಅಂಬಿಗನ ಮಗ, ಕುಲೀನ ಅನ್ನೋ ಅವಹೇಳನಕ್ಕೆ ಗುರಿಯಾದ, ಕರ್ಣ. . . . ಸುಯೋಧನನ ಸ್ನೇಹ ಅವನನ್ನು ಅಂಗರಾಜ್ಯಾಧಿಪತಿಯನ್ನಾಗಿಸಿದರೂ ಆ ಅವಹೇಳನ ತಪ್ಪಲಿಲ್ಲ. ಸ್ವಾರ್ಥಿ ಕುಂತಿಯ ಮಾತಿನಿಂದ, *ತಾನೇ ರಾಜ್ಯದ ಉತ್ತರಾಧಿಕಾರಿಯಾಗಬೇಕಾದವನು* ಎಂದು ತಿಳಿದರೂ, ಗೆಳೆಯ ಸುಯೋಧನನ ಪಕ್ಷ ಬಿಡದೆ ಅವನಿಗಾಗಿ ಕಾದು ಮಡಿದ, ಧೀರತ್ಯಾಗಿ. ತನಗೆ ಅಂತ್ಯ ತರುವುದೆಂದು ತಿಳಿದಿದ್ದರೂ, ತಾಯಿಗೆ ಕೊಟ್ಟಮಾತಿನಂತೆ ರಣರಂಗದಲ್ಲೂ, ತೊಟ್ಟಬಾಣಾನ ತೊಡದೆ, ಬೇಡಲು ಬಂದವನು ಕಪಟಬ್ರಾಹ್ಮಣನೆಂದು ತಿಳಿದರೂ, ತನ್ನ ಕವಚಕುಂಡಲಗಳನ್ನು ದಾನವಾಗಿ ನೀಡಿದ ದಾನಶೂರ ಕರ್ಣ. ಇಷ್ಟು ಕಾರಣ ಸಾಲದೇ ಅಪ್ಪಾಜಿ, ಕಲಿಕರ್ಣ, ಮಹಾಭಾರತದ ದುರಂತನಾಯಕ ಅನ್ನೋದಕ್ಕೆ ?

ಭಾಸ್ಕರಾಚಾರ್ಯ :– ಸರಿಯಾಗಿ ಸಮರ್ಥಿಸಿದೆ ಮಗು. . . . *(ಭಾವುಕರಾಗಿ)* ಮಹಾಕಾವ್ಯಗಳು ನಿಜಜೀವನದ ಕೈಗನ್ನಡಿ. ಅವು ಜೀವನದಲ್ಲಿ ಅಪರೂಪವಾಗಿ ಕಾಣಿಸಿಕ್ಕೊಳ್ಳುವ, ಆದರ್ಶ ಜೀವಿಗಳನ್ನು ಬೆಳಗಿಸಿ, ಅವರುಗಳನ್ನು ಎಲ್ಲಕಾಲಕ್ಕೂ ಮಾರ್ಗದರ್ಶಿಗಳನ್ನಾಗಿಸುತ್ತವೆ. . . . ದಾನಶೂರ ಕರ್ಣ ಸಹ ಅಂತಹ ಆದರ್ಶ ಗುಣಗಳಿರುವ ಮಹಾನ್ ಯೋಧ. . . . ಅಂತಹವನು, ತನ್ನ ಒಡಹುಟ್ಟಿದ ತಮ್ಮನಿಂದಲೇ ರಣರಂಗದಲ್ಲಿ ವಧೆಯಾಗುವುದು ದಾರುಣ ವಿಪರ್ಯಾಸ. *(ಉದ್ವಿಗ್ನರಾಗಿ)* ಪಾರ್ಥಃ ಕರ್ಣವಧಾ . . . ಪಾರ್ಥಃ ಕರ್ಣವಧಾಯ . . . ಮಾರ್ಗಣಗಣಂ . . .

*(ಭಾಸ್ಕರಾಚಾರ್ಯರು ನಿಧಾನವಾಗಿ ಶ್ಲೋಕವನ್ನು ಹಂಸಾನಂದಿ ರಾಗದಲ್ಲಿ ಹಾಡುವರು. ಲೀಲಾವತಿಯು ಬೇಗಬೇಗನೆ ತಾಳಪತ್ರದಲ್ಲಿ ಬರೆದುಕ್ಕೊಳ್ಳುವಳು)*

***ಪಾರ್ಥಃ ಕರ್ಣವಧಾಯ ಮಾರ್ಗಣಗಣಂ ಕ್ರುದ್ಧೋ ರಣೇ ಸಂದಧೇ***
***ತಸ್ಯಾರ್ಧೇನ ನಿವಾರ್ಯ ತಚ್ಚರಗಣಂ ಮೂಲೈಶ್ಚತುರ್ಭಿರ್ಹಯಾನ್ !***
***ಶಲ್ಯಂ ಷಡ್‌ಭಿರಥೇಷುಭಿಸ್ತ್ರಿಭಿರಪಿಚ್ಛತ್ರಂ ಧ್ವಜಂ ಕಾರ್ಮುಕಂ***
***ಚಿಚ್ಛೇದಾಸ್ಯ ಶಿರಃ ಶರೇಣ ಕತಿ ತೇ ಯಾನರ್ಜುನಃ ಸಂದಧೇ !!***

ಲೀಲಾವತಿ :– *(ಬರೆದು ಮುಗಿಸಿ)* ಈ ಗಣಿತ ಕವನ ಬಹಳ ಚೆನ್ನಾಗಿದೆ ಅಪ್ಪಾಜಿ.

ಭಾಸ್ಕರಾಚಾರ್ಯ :– *(ತಾಳಪತ್ರವನ್ನುಪಡೆದು ಓದಿ)* . . . ತಪ್ಪಿಲ್ಲದೆ ಬರೆದಿದ್ದೀಯೆ. ಬಹಳ ಸಂತೋಷ. . . . ಇದರ ಅರ್ಥವೇನು ?

ಲೀಲಾವತಿ :– *(ತಾಳಪತ್ರವನ್ನು ಪಡೆದು, ಅದನ್ನು ನೋಡುತ್ತಾ)* '***ಕುಪಿತಗೊಂಡ ಅರ್ಜುನನು, ರಣರಂಗದಲ್ಲಿ ಕರ್ಣನನ್ನು ವಧಿಸಲು ಕೆಲವು ಬಾಣಗಳನ್ನು ಸಂಗ್ರಹಿಸಿದನು. ಸಂಗ್ರಹಿಸಿದ ಬಾಣಗಳ ಅರ್ಧದಷ್ಟು ಬಾಣಗಳಿಂದ ಕರ್ಣನ ಬಾಣಗಳನ್ನು ನಿಷ್ಕ್ರಿಯಗೊಳಿಸಿದನು. ಅವುಗಳ ಸಂಖ್ಯೆಯ ವರ್ಗಮೂಲದ ನಾಲ್ಕರಷ್ಟು ಬಾಣಗಳಿಂದ ಕರ್ಣನ ಕುದುರೆಗಳನ್ನು ಬೀಳಿಸಿದನು, ನಂತರ ಆರುಬಾಣಗಳಿಂದ ಕರ್ಣನ ಮೊನಚಾದ ಶಲಾಕೆಗಳನ್ನೂ, ಹಾಗೂ ಮೂರು ಬಾಣಗಳಿಂದ ಕರ್ಣನ ಶ್ವೇತಛತ್ರ, ಧ್ವಜ ಮತ್ತು ಬಿಲ್ಲನ್ನು ತುಂಡರಿಸಿದನು. . . . ಉಳಿದ ಒಂದು ಬಾಣದಿಂದ ಅರ್ಜುನನು ಕರ್ಣನ ತಲೆಯನ್ನು ಉರುಳಿಸಿದರೆ, ಅರ್ಜುನನು ಸಂಗ್ರಹಿಸಿದ್ದ ಬಾಣಗಳ ಸಂಖ್ಯೆಯೆಷ್ಟು ?*** ಸರೀನ ಅಪ್ಪಾಜಿ.

ಭಾಸ್ಕರಾಚಾರ್ಯ :– *(ಮೆಚ್ಚುಗೆಯಿಂದ)* ಸರಿಯಾಗಿ ಹೇಳಿದೆ, ಮಗು . . . ಈ ಸಮಸ್ಯೆನಾ ಬಿಡಿಸೋ ಕ್ರಮವೇನು, ನೆನಪಿದ್ಯಾ ?

ಲೀಲಾವತಿ :– ನೆನಪಿದೆ, ಅಪ್ಪಾಜಿ *(ಭಾಗೇಶ್ವರಿ ರಾಗದಲ್ಲಿ ಹಾಡುವಳು)*

***ಗುಣಘ್ನಮೂಲೇನಯುತಸ್ಯರಾಶೇರ್ದೃಷ್ಟಸ್ಯ ಯುಕ್ತಸ್ಯ ಗುಣಾರ್ಧಕೃತ್ಯಾ !***
***ಮೂಲಂ ಗುಣಾರ್ಧೇನ ಯುತಂ ವಿಹೀನಂ ವರ್ಗೀಕೃತಂ ಪ್ರಷ್ಟುರಭೀಷ್ಟರಾಶಿಃ !!***

ಈ ಸೂತ್ರದಪ್ರಕಾರ, "***ಅಭೀಷ್ಟರಾಶಿಯು, ಅದರ ವರ್ಗಮೂಲವನ್ನು ಕೊಟ್ಟಿರುವ ಸಂಖ್ಯೆಯಿಂದ ಗುಣಿಸಿದಾಗ ಬರುವ ಗುಣಲಬ್ಧಕ್ಕೆ ಮತ್ತೊಂದು ಕೊಟ್ಟಿರುವ ಸಂಖ್ಯೆಯನ್ನು ಕೂಡಿದಾಗ ಬರುವ ಮೊತ್ತವು ಸಮನಾದರೆ, ಅಭೀಷ್ಟರಾಶಿಯನ್ನ ಪಡೆಯಬಹುದು."*** *(ಯೋಚಿಸುತ್ತಾ)* ***ಕೊಟ್ಟಿರುವ ಗುಣಕಾರ್ಧದವರ್ಗಕ್ಕೆ ಕೊಟ್ಟಿರುವ ಯೋಗಕವನ್ನು ಕೂಡಿ, ಬರುವ ಮೊತ್ತದ ವರ್ಗಮೂಲವನ್ನು ಪಡೆಯಬೇಕು. ಹೀಗೆ ಬರೋ ವರ್ಗಮೂಲವನ್ನ ಗುಣಕಾರ್ಧಕ್ಕೆ ಕೂಡಿದಾಗ ಅಥವಾ ಗುಣಕಾರ್ಧದಿಂದ ಕಳೆದಾಗ ಬರುವ ರಾಶಿಯ ವರ್ಗವೇ ಅಭೀಷ್ಟರಾಶಿ.***

**ಮುತ್ತಿನಮಣಿ**

[ಎರಡನೇ ಭಾಸ್ಕರಾಚಾರ್ಯರ ಜೀವನ ಮತ್ತು ಕೃತಿಗಳನ್ನು ಪರಿಚಯಿಸುವ ಕಿರು ನಾಟಕ]

ಭಾಸ್ಕರಾಚಾರ್ಯ :– ಸಮಸ್ಯೆಯನ್ನ ಬಿಡಿಸುವ ವಿಧಾನ ಸರಿಯಾಗಿದೆ. . . .

ಲೀಲಾವತಿ :– *(ಉತ್ಸಾಹದಿಂದ)* ಈಗ ನೀವು ರಚಿಸಿದ ಸಮಸ್ಯೆಯ ಉತ್ತರ . . . ಅರ್ಜುನನು ಸಂಗ್ರಹಿಸಿದ ಬಾಣಗಳ ಸಂಖ್ಯೆಯೇ ಅಭೀಷ್ಟರಾಶಿ. ಅದರ ಅರ್ಧದಷ್ಟು ಬಾಣಗಳಿಂದ ಕರ್ಣನ ಬಾಣಗಳನ್ನು ನಿಷ್ಕ್ರಿಯಗೊಳಿಸಿದನು. ಅದರ ವರ್ಗಮೂಲದ ನಾಲ್ಕರಷ್ಟು ಬಾಣಗಳಿಂದ ಕರ್ಣನ ಕುದುರೆ ಗಳನ್ನು ಕೆಡವಿದನು. ಆರು ಬಾಣಗಳಿಂದ ಕರ್ಣನ ಮೊನಚಾದ ಶಲಾಕೆಗಳನ್ನ, ಮೂರು ಬಾಣಗಳಿಂದ ಅವನ ಬೆಳ್ಗೊಡೆ, ಬಾವುಟ ಮತ್ತು ಬಿಲ್ಲನ್ನ ಮುರಿದನು. ಉಳಿದ ಒಂದು ಬಾಣದಿಂದ ಕರ್ಣನ ಶಿರವನ್ನು ಉರುಳಿಸಿದನು . . . ಅಂದರೆ, ಅಭೀಷ್ಟರಾಶಿಯ ಅರ್ಧದಷ್ಟಕ್ಕೆ, ಅದರ ವರ್ಗಮೂಲದ ನಾಲ್ಕರಷ್ಟು ಮತ್ತು ಹತ್ತನ್ನ ಕೂಡಿದರೆ ಬರುವ ಬರುವ ಮೊತ್ತಕ್ಕೆ ಅಭೀಷ್ಟರಾಶಿಯು ಸಮ. ಅಂದರೆ, ಅಭೀಷ್ಟರಾಶಿಯು, ಅದರ ವರ್ಗಮೂಲದ ಎಂಟರಷ್ಟಕ್ಕೆ ಇಪ್ಪತ್ತನ್ನು ಕೂಡಿದರೆ ಬರುವರಾಶಿಗೆ ಸಮ. . . . ಇಲ್ಲಿ ಗುಣಕ ಎಂಟು, ಯೋಗಕ ಇಪ್ಪತ್ತು. . . . ಗುಣಕಾರ್ಧ ನಾಲ್ಕು, ಗುಣಕಾರ್ಧದವರ್ಗ ಹದಿನಾರು, ಇದಕ್ಕೆ ಯೋಗಕ ಇಪ್ಪತ್ತನ್ನ ಕೂಡಿದಾಗ ಬರುವ ಮೊತ್ತ ಮೂವತ್ತಾರು. ಮೂವತ್ತಾರರ ವರ್ಗಮೂಲ ಆರು. . . . ಈ ವರ್ಗಮೂಲ ಆರನ್ನು ಗುಣಕಾರ್ಧ ನಾಲ್ಕಕ್ಕೆ ಕೂಡಿದಾಗ ಬರುವ ಮೊತ್ತ ಹತ್ತು. ಹತ್ತರ ವರ್ಗ ನೂರು, ಅಥವಾ ಗುಣಕಾರ್ಧ ನಾಲ್ಕರಿಂದ ವರ್ಗಮೂಲ ಆರನ್ನ ಕಳೆದಾಗ ಬರುವ ವ್ಯತ್ಯಾಸ ಋಣಾತ್ಮಕ ಎರಡು. ಎರಡರ ವರ್ಗ ನಾಲ್ಕು. . . ಅರ್ಜುನ ಕರ್ಣನ ವಧೆಗಾಗಿ ಸಂಗ್ರಹಿಸಿದ ಬಾಣಗಳ ಸಂಖ್ಯೆ ನೂರು. ನಾಲಕ್ಕಲ್ಲ.

ಭಾಸ್ಕರಾಚಾರ್ಯ :– ಇಲ್ಲಿಗೆ ಪಾಠ ಸಾಕು. . . . ಪೂಜೆಗೆ ವೇಳೆಯಾಯಿತು. *(ಇಬ್ಬರೂ ಏಳುವರು)*

**ತೆರೆ**

**ಪ್ರವೇಶ – ೫**

*(ಸೂತ್ರಧಾರ ಮತ್ತು ಗೆಳತಿಯ ಪ್ರವೇಶ)*

ಸೂತ್ರಧಾರ :– ಭಾಸ್ಕರಾಚಾರ್ಯರ ಸದಾ ಜಾಗೃತ ಕವಿಮನಸ್ಸು, ಗಣಿತಕವನಗಳ ರಚನೆಗಾಗಿ ಸೂಕ್ತ ಸನ್ನಿವೇಶಗಳನ್ನು ಅರಸುತ್ತಿತ್ತು.

ಗೆಳತಿ :– ನಿಜ, ಕರ್ಣಾರ್ಜುನರ ಕಡೆಯ ಕದನವನ್ನು ಆಧರಿಸಿ ರಚಿಸಿದ ಪಾರ್ಥಃ ಕರ್ಣವಧಾಯ ಅನ್ನೋ ಕವನವೇ ಅದಕ್ಕೆ ಸಾಕ್ಷಿ.

ಸೂತ್ರಧಾರ :– ಅಷ್ಟೇ ಅಲ್ಲ, ಅವರ ಮನಸ್ಸು ಯಾವುದೇ ಕರಣೀಗತ ಸಂಖ್ಯೆ *(any irrational number)* ಗೆ ಅತಿಸಮೀಪ ಭಾಗಹಾರ ಬೆಲೆಗಳನ್ನು ಪಡೆಯಲು, ಬ್ರಹ್ಮಗುಪ್ತರ ಭಾವನಾ ಕ್ರಮವನ್ನು ಪರಿಷ್ಕರಿಸುವ ವಿಚಾರದಲ್ಲಿಯೂ ಮಗ್ನವಾಗಿತ್ತು.

ಗೆಳತಿ :– ಬ್ರಹ್ಮಗುಪ್ತರ ಭಾವನಾಕ್ರಮ ! . . . ಕರಣೀಗತ ಸಂಖ್ಯೆ ! . . . ಹಾಗೆಂದರೆ ?

ಸೂತ್ರಧಾರ :– ಯಾವ ಸಂಖ್ಯೆಯ ವರ್ಗಮೂಲ, ಪೂರ್ಣ ಸಂಖ್ಯೆ ಅಲ್ಲವೋ ಅಂತಹ ಸಂಖ್ಯೆಗೆ ಕರಣೀಗತ ಸಂಖ್ಯೆ ಅಥವಾ ಅಭಾಗಲಬ್ಧ ಸಂಖ್ಯೆ ಎಂದು ಹೆಸರು. ಅವುಗಳ ಭಾಗಲಬ್ಧಬೆಲೆ ತಿಳಿಯದಿದ್ದರೆ, ಸಮಸ್ಯೆಗಳನ್ನು ಬಿಡಿಸಲು ಸಾಧ್ಯವಿಲ್ಲ. ಬ್ರಹ್ಮಗುಪ್ತರ ಭಾವನಾಕ್ರಮದಿಂದ ಎಲ್ಲಾ ಅಭಾಗಲಬ್ಧ ಸಂಖ್ಯೆಗಳಿಗೂ ಅತಿಸಮೀಪ ಭಾಗಲಬ್ಧ ಬೆಲೆಗಳನ್ನು ಪಡೆಯಲು ಸಾಧ್ಯವಿಲ್ಲ.
ಎಲ್ಲಾ ಅಭಾಗಲಬ್ಧ ಸಂಖ್ಯೆಗಳಿಗೂ ಅತಿ ಸಮೀಪ ಭಾಗಲಬ್ಧ ಬೆಲೆಗಳನ್ನು ಪಡೆಯಬಲ್ಲ ವಿಧಾನದ ಅನ್ವೇಷಣೆಯಲ್ಲಿ ಭಾಸ್ಕರಾಚಾರ್ಯರ ಮನಸ್ಸು ಮಗ್ನವಾಗಿತ್ತು . . . ಅಷ್ಟೇ ಅಲ್ಲದೆ, ಗಣಿತ ಸಮಸ್ಯೆಗಳನ್ನು ರಚಿಸಲು, ಹೊಸಹೊಸ ಸನ್ನಿವೇಷಗಳ ಅನ್ವೇಷಣೆಯಲ್ಲೂ ಅವರ ಮನಸ್ಸು ಮಗ್ನವಾಗಿತ್ತು.
ಆಚಾರ್ಯರು ತನ್ಮಯರಾಗಿ ಏನನ್ನೋ ಬರೆಯುತ್ತಿದ್ದಾರೆ, ಏನೆಂದು ತಿಳಿಯೋಣ ಬನ್ನಿ.

**ತೆರೆ**

**ಮುತ್ತಿನಮಣಿ**

[ಎರಡನೇ ಭಾಸ್ಕರಾಚಾರ್ಯರ ಜೀವನ ಮತ್ತು ಕೃತಿಗಳನ್ನು ಪರಿಚಯಿಸುವ ಕಿರು ನಾಟಕ]

**ದೃಶ್ಯ – ೫**

*(ರಾತ್ರಿಯ ಉಪಾಹಾರದ ನಂತರ ಭಾಸ್ಕರಾಚಾರ್ಯರು ವ್ಯಾಸಂಗಕೊಠಡಿಯಲ್ಲಿ ಕುಳಿತು ನಂದಾದೀಪದ ಬೆಳಕಿನಲ್ಲಿ ಬರೆಯುತ್ತಿದ್ದಾರೆ. ನಂದಾದೀಪದಲ್ಲಿ ತೈಲವು ಕಡಿಮೆಯಾಗಿ ಬೆಳಕು ಕಡಿಮೆಯಾಗುತ್ತಿರುವುದರ ಅರಿವೂ ಅವರಿಗಿಲ್ಲ. ಅವರ ಧರ್ಮಪತ್ನಿ ಕಲಾವತಿಯ ಪ್ರವೇಶ.)*

ಕಲಾವತಿ :– ಇದೇನು ? . . . ಬೆಳಕು ಕಡಿಮೆಯಾಗ್ತಿದ್ದರೂ ಬರೀಬೇಕೇ ? ಕಣ್ಣಿನ ದೃಷ್ಟಿ ಕೆಡೊಲ್ಲವೇ ! *(ಒಳಗೆ ಹೋಗಿ, ಬೆಳಗುತ್ತಿರುವ ಮತ್ತೊಂದು ನಂದಾದೀಪವನ್ನು ತಂದು ಆಚಾರ್ಯರ ಪಕ್ಕದಲ್ಲಿ ಇಡುತ್ತಾ)* . . . . ಬರೆಯೋದಕ್ಕೆ ಕುಳಿತರಂತೂ, ಆನೆ ಆಡಿ ಭೂತ ಕುಣಿದರೂ, ಇವರಿಗೆ ಗೊತ್ತಾಗೋದೇ ಇಲ್ಲಾ.

*(ಯಾವುದರ ಪರಿವೆಯೂ ಇಲ್ಲದೆ ಬರೆದು ಮುಗಿಸಿದ ಆಚಾರ್ಯರು ತಲೆಯೆತ್ತಿ, ಪತ್ನಿ ಕಲಾವತಿಯನ್ನು ನೋಡುವರು.)*

ಭಾಸ್ಕರ :– ಏನೋ ಹೇಳ್ತಿದ್ದೆ. . . . ಕೇಳಿಸ್ಲಿಲ್ಲ *(ಗೋಗರೆಯುವ ಹುಸಿಧ್ವನಿ )* . . . ಕೋಪಿಸ್ಕೋ ಬೇಡ. ಅದೇನು ಹೇಳು.

ಕಲಾವತಿ :– *(ಹುಸಿ ಮುನಿಸು)* ನನ್ನ ಕೋಪಾನೆಲ್ಲಾ, ಗಮನಿಸೋರೂ ಇದಾರ್ಯೇ ಇಲ್ಲಿ. . . . ಇದಕ್ಕೆಲ್ಲಾ ಕೋಪಿಸ್ಕೊಳೋಕೆ ಇದೇನು ಹೊಸದೇ ? ಬರವಣಿಗೆ, ಬೋಧನೆ, ಅಧ್ಯಯನ, ಸಂಶೋಧನೆ . . . ಇಷ್ಟೇ ನಿಮ್ಮ ಪ್ರಪಂಚ. . . . ನಾವೆಲ್ಲಾ ಇರೋದೂ ನೆನಪಿದ್ಯೋ ಇಲ್ಲವೋ ಕಾಣೆ.

ಭಾಸ್ಕರ :– ನಿಂದು ಯಾವಾಗ್ಲೂ ಉತ್ಪ್ರೇಕ್ಷೇನೇ. . . . ನಿಜಾ ಏನೂ ಅಂತ ನಿನಗೂ ಗೊತ್ತು., ಅದಿರಲಿ, . . *(ಬರೆಯುತ್ತಿದ್ದ ತಾಳೆಗರಿಯನ್ನು ಕೊಡುತ್ತ)* ಇವತ್ತು ಸಂಜೆ ಸರೋವರದ ದಡದಲ್ಲಿ ಅಡ್ಡಾಡ್ತಾ ಇದ್ದಾಗ, ಅಲ್ಲಿದ್ದ ಹಂಸಗಳ ಹಾರಾಟ, ಈ ಗಣಿತಶ್ಲೋಕ ರಚಿಸೋಕೆ ಪ್ರಚೋದಿಸ್ತು. . . . ಈಗತಾನೆ ಅದನ್ನ ಬರೆಯೋಕೆ ಸಾಧ್ಯವಾಯ್ತು. . . . ಇದನ್ನ ಓದು. . . . ಹ್ಞಾ . . . ಬೇಡ, ನಿನ್ನ ಮಧುರವಾದ ಕೊರಳಿನಿಂದ ಹಾಡು.

ಕಲಾವತಿ :– *(ತಾಳಪತ್ರದಲ್ಲಿರುವುದನ್ನು ಮನಸ್ಸಿನಲ್ಲೇ ಓದಿ, ಕಲಾವತೀ ರಾಗದಲ್ಲಿ ಸುಶ್ರಾವ್ಯವಾಗಿ ಹಾಡುವಳು)*

***ಯಾತಂ ಹಂಸಕುಲಸ್ಯ ಮೂಲದಶಕಂ ಮೇಘಾಗಮೇ ಮಾನಸಂ***
***ಪ್ರೋಡ್ಡೀಯ ಸ್ಥಲಪದ್ಮಿನೀವನಮಗಾದಷ್ಟಾಂಶಕೋಽಮ್ಭಸ್ತಟಾತ್ !***
***ಬಾಲೇ ಬಾಲಮೃಣಾಲಶಾಲಿನಿ ಜಲೇ ಕೇಳಿಕ್ರಿಯಾಲಾಲಸಂ***
***ದೃಷ್ಟಂ ಹಂಸಯುಗತ್ರಯಂ ಚ ಸಕಲಾಂ ಯೂಥಸ್ಯ ಸಂಖ್ಯಾಂ ವದ ! !***

ಭಾಸ್ಕರ :– *(ಮೆಚ್ಚುಗೆ)* ಬಹಳ ಸೊಗಸಾಗಿ ಹಾಡಿದೆ. . . . ಇದರಲ್ಲಿರೋ ಸಮಸ್ಯೆಯ ಅರ್ಥವಾಯ್ತಾ ?

ಕಲಾವತಿ :– ಇಷ್ಟು ವರ್ಷ ನಿಮ್ಮಜೊತೆ ಸಂಸಾರ ಮಾಡಿ ಇಷ್ಟೂ ಗೊತ್ತಾಗೋಲ್ಲವೇ ! ಹೇಳ್ತೀನಿ ಕೇಳಿ . *(ತಾಳಪತ್ರವನ್ನು ನೋಡುತ್ತಾ)* ಸರೋವರದಲ್ಲಿದ್ದ ಹಂಸಗಳು, ಮೋಡಗಳ ಆಗಮನದಿಂದ ಮಳೆಗಾಲದ ಸೂಚನೆಯನ್ನು ತಿಳಿದವು. ಆಗ ಅಲ್ಲಿದ್ದ ಹಂಸಗಳ ಸಂಖ್ಯೆಯ ವರ್ಗಮೂಲದ ಹತ್ತರಷ್ಟು ಹಂಸಗಳು, ಮಾನಸ ಸರೋವರದ ಕಡೆಗೆ ಹಾರಿದವು. ಎಂಟನೇ ಒಂದು ಭಾಗ ಹಂಸಗಳು ದಡದಲ್ಲಿ ಎತ್ತರವಾದ ಸ್ಥಳದಲ್ಲಿರುವ ಆನೆಗಳು ವಾಸಿಸುವ ವನಕ್ಕೆ ಹೋದವು. . . ಉಳಿದ ಮೂರು ಜೋಡಿ ಹಂಸಗಳು ಕಮಲದ ಎಳಸಾದ ಕಾಂಡಗಳಿಂದ ತುಂಬಿರುವ ಅದೇ ಕೊಳದ ತಿಳಿನೀರಿನಲ್ಲಿ ಜಲಕ್ರೀಡೆಯಲ್ಲಿ ಮಗ್ನವಾಗಿದ್ದರೆ, ಕೊಳದಲ್ಲಿದ್ದ ಹಂಸಗಳ ಒಟ್ಟು ಸಂಖ್ಯೆಯೇನು ?

ಭಾಸ್ಕರ :– *(ಮೆಚ್ಚುಗೆಯಿಂದ)* ಸರಿ, . . . ಈ ಸಮಸ್ಯೆಯ ಉತ್ತರ ?

ಕಲಾವತಿ :– (ನುಣುಚಿಕೊಳ್ಳುತ್ತ) ಅಷ್ಟೆಲ್ಲಾ ತಿಳಿದಿದ್ದೀ ತಾನೇ.

*(ಕಲಾವತಿಯು ತಾಳಪತ್ರವನ್ನು ವ್ಯಾಸಪೀಠದಮೇಲೆ ಇಡಲು ಬಾಗಿದಾಗ, ಆಚಾರ್ಯರು ತಾಳಪತ್ರವನ್ನು ಪಡೆಯಲು ಕೈನೀಡುವರು. ಆಗ ಕಲಾವತಿಯ ಕೊರಳಿನಿಂದ ಜೋತುಬಿದ್ದ ಮುತ್ತಿನಮಾಲೆಯು ಆಚಾರ್ಯರ ಬೆರಳುಗಳಿಗೆ ಸಿಕ್ಕಿ, ಅದನ್ನು ತಿಳಿಯದ ಕಲಾವತಿಯು ಜಗ್ಗನೆ ನಿಂತಾಗ, ಮುತ್ತಿನಮಾಲೆಯು ತುಂಡಾಗಿ ಮುತ್ತಿನಹರಳುಗಳು ನೆಲದಮೇಲೆ ಉರುಳುವುವು.)*

ಭಾಸ್ಕರ :– *(ಎದ್ದು, ಹರಳುಗಳನ್ನು ಆರಿಸಲು ನೆರವಾಗುತ್ತಾ, ತಮ್ಮಲ್ಲೇ ಗುಣುಗುಣಿಸುವರು)* . . . ಹಾರ, ಹಾರಸ್ತಾರ, . . ಹಾರಸ್ತಾರಸ್ತರುಣ್ಯಾ, ಚನ್ನಾಗಿದೆ, . . . ಬರೆದಿಡ್ಬೇಕು.

*(ಆಚಾರ್ಯರು ವ್ಯಾಸಪೀಠದ ಮುಂದೆ ಕುಳಿತು ಬರೆಯತೊಡಗುವರು. ಕಲಾವತಿಯು ಹರಳುಗಳನ್ನು ಆರಿಸಿದ ಮೇಲೆ, ಅವರನ್ನೇ ಒಲವಿನಿಂದ ನೋಡುತ್ತಾ ನಿಲ್ಲುವಳು. ಬರೆದು ಮುಗಿಸಿದ ಆಚಾರ್ಯರು ಬರೆದ ತಾಳಪತ್ರವನ್ನು ಕಲಾವತಿಗೆ ಕೊಡುವರು.)*

**ಮುತ್ತಿನಮಣಿ**

[ಎರಡನೇ ಭಾಸ್ಕರಾಚಾರ್ಯರ ಜೀವನ ಮತ್ತು ಕೃತಿಗಳನ್ನು ಪರಿಚಯಿಸುವ ಕಿರು ನಾಟಕ]

ಭಾಸ್ಕರ :– ಕಲಾವತೀ, ಈ ಕವನವನ್ನೂ ಹಾಡು.

ಕಲಾವತಿ *:–(ಮನಸ್ಸಿನಲ್ಲೇ ಓದಿಕ್ಕೊಳ್ಳುವಳು. ಹುಸಿಮುನಿಸಿನಿಂದ)* ಇಂತಹ ಕವನ ಬರೆಯೋಕೆ ನನ್ನ ಮುತ್ತಿನಸರಾನೇ ತುಂಡುಮಾಡಬೇಕಿತ್ತಾ. . . . ವಯಸ್ಸಾದ್ರೂ . . .

ಭಾಸ್ಕರ :– ಅಂಥಾದ್ದೇನ್ ಬರ್ದಿದೀನಿ. *(ಗೊಣಗರೆಯುತ್ತಾ)* ಏನೇ ಇರಲಿ, ಇದನ್ನ ಹಾಡು, . . . ನನಗಾಗಿ,

ಕಲಾವತಿ :– (ಹಿಂದೋಳ ರಾಗದಲ್ಲಿ ಸುಶ್ರಾವ್ಯ ವಾಗಿ ಹಾಡುವಳು)

**ಹಾರಸ್ತಾರಸ್ತರುಣ್ಯಾ ನಿಧುವನಕಲಹೇ ಮೌಕ್ತಿಕಾನಾಂ ವಿಶೀರ್ಣೋ**
**ಭೂಮೌ ಯಾತಸ್ತ್ರಿಭಾಗಃ ಶಯನತಲಗತಃ ಪಂಚಮಾಂಶೋಽಸ್ಯ ದೃಷ್ಟಃ ।**
**ಪ್ರಾಪ್ತಃ ಷಷ್ಠಃ ಸುಕೇಶ್ಯಾ ಗಣಕ ದಶಮಕಃ ಸಂಗೃಹೀತಃ ಪ್ರಿಯೇಣ**
**ದೃಷ್ಟಂ ಷಟ್ಕಂ ಚ ಸೂತ್ರೇ ಕಥಯ ಕತಿಪಯೈರ್ಮೌಕ್ತಿಕೈರೇಷ ಹಾರಃ ॥**

ಭಾಸ್ಕರ :– ಇದರಲ್ಲಿ ಅಂಥಾದ್ದೇನಿದೆ, . . . ಹೀಯಾಳಿಸೋ ಅಂಥಾದ್ದು. . . .

ಕಲಾವತಿ :– ಏನಿಲ್ಲ, ನೀವೇ ಹೇಳಿ. ಇದೂ, ವಿದ್ಯಾರ್ಥಿಗಳಿಗೆ, ಅದ್ರಲ್ಲೂ ನಿಮ್ಮ ಮುದ್ದಿನ ಮಗಳಿಗೆ ಕೊಡೋ ಸಮಸ್ಯೇನಾ ? ಎಂಥಾ ಸಮಸ್ಯೆ ! . . *(ವ್ಯಂಗ್ಯ).* ಪ್ರಣಯ ಕಲಹದಲ್ಲಿದ್ದಾಗ, ತರುಣಿಯ ಮುತ್ತಿನಹಾರವು ತುಂಡಾಗಿ, ಅದರಲ್ಲಿದ್ದ ಮೂರನೇಒಂದು ಭಾಗ ಮುತ್ತಿನಮಣಿಗಳು ನೆಲದ ಮೇಲೆ ಉರುಳಿದವು. ಐದನೇಒಂದು ಭಾಗ ಮಣಿಗಳು ಹಾಸಿಗೆಯಮೇಲೆ, ಆರನೇಒಂದು ಭಾಗ ಸುಂದರವಾದ ಕೂದಲುಗಳಿರುವ ಆ ತರುಣಿಯಲ್ಲಿ ಹತ್ತನೇಒಂದು ಭಾಗ ಅವಳ ಪ್ರಿಯತಮನಲ್ಲಿ ಕಂಡುಬಂದು, ಉಳಿದ ಆರು ಮಣಿಗಳು ಸರದಲ್ಲೇ ಜೋತುಬಿದ್ದಿದ್ದರೆ, ಗಣಿತ ಬಲ್ಲವನೇ, ಸರದಲ್ಲಿದ್ದ ಮುತ್ತಿನಮಣಿಗಳು ಎಷ್ಟು ಹೇಳು. . . . ಮುದ್ದಿನಮಗಳಿಗೆ ಕೊಡೋ ಗಣಿತ ಸಮಸ್ಯೇನಾ ಇದು ?

ಭಾಸ್ಕರ :– ಮಗಳಿಗೇ ಯಾಕೆ, . . . ಯಾವವಿದ್ಯಾರ್ಥೀಗೂ ಇದನ್ನ ಕೊಡೋಲ್ಲಾ . . . ಆದರೆ, ಮನಸ್ಸಿಗೆ ತೋಚಿದ್ದನ್ನ ಬರೆದಿಡ್ಲೂಬಾರ್ದೇ ? . . . ಹೋಗ್ಲೀ, ಈ ಸಮಸ್ಯೇಗಾದ್ರೂ ಉತ್ತರ ಹೇಳು.

ಕಲಾವತಿ :– *(ನಾಚುತ್ತಾ)* ಪ್ರಯತ್ನಿಸ್ತೀನಿ. ತಪ್ಪಾದ್ರೆ ನಗಬಾರ್ದು. . . . *(ತಾಳಪತ್ರವನ್ನು ನೋಡುತ್ತಾ,, ಯೋಚಿಸುತ್ತಾ, ನಿಧಾನವಾಗಿ ಹೇಳುವರು)* ನೆಲದಮೇಲೆ ಬಿದ್ದ ಮೂರನೇಒಂದು ಭಾಗಕ್ಕೆ ಹಾಸಿಗೇ ಮೇಲೆ ಬಿದ್ದ ಐದನೇಒಂದು ಭಾಗ ಕೂಡಿದ್ರೆ ಹದಿನೈದನೇಎಂಟು. ಹದಿನೈದನೇ ಎಂಟಕ್ಕೆ ತರುಣಿ ಯಲ್ಲಿದ್ದ ಆರನೇಒಂದು ಭಾಗ ಕೂಡಿದ್ರೆ ಬರೋದು ಮೂವತ್ತನೇ ಇಪ್ಪತ್ತೊಂದು, ಅಂದರೆ ಹತ್ತನೇ ಏಳು, ಈ ಹತ್ತನೇಏಳಿಗೆ ಪ್ರಿಯತಮನಲ್ಲಿದ್ದ ಹತ್ತನೇಒಂದುಭಾಗ ಕೂಡಿದರೆ ಬರೋದು ಹತ್ತನೇಎಂಟು ಅಂದರೆ ಐದನೇ ನಾಲ್ಕು. . . . ಒಂದರಲ್ಲಿ ಐದನೇನಾಲ್ಕು ಹೋದ್ರೆ ಉಳ್ಯೋದು ಐದನೇಒಂದು. . . . . ಉಳಿದದ್ದು ಐದನೇಒಂದಾದ್ರೆ ಒಟ್ಟು ಇದ್ದದ್ದು ಒಂದು. . . ಉಳಿದದ್ದು ಆರು ಆದ್ರೆ, ಒಟ್ಟು ಇರೋದು ಮೂವತ್ತು. . . . ಅಂದ್ರೆ, ತರುಣಿಯ ಸರದಲ್ಲಿದ್ದ ಮುತ್ತಿನ ಮಣಿಗಳ ಸಂಖ್ಯೆ ಮುವ್ವತ್ತು, . . . ಸರೀ ತಾನೇ ?

ಭಾಸ್ಕರ :– *(ಸಂತೋಷದಿಂದ)* ಬಹಳ ಚನ್ನಾಗಿ ಸಮಸ್ಯೆಯನ್ನ ಬಿಡಿಸಿದೀಯೆ. . . . ಇಷ್ಟು ತರ್ಕಬದ್ಧವಾಗಿ ಬಿಡಿಸ್ತೀಯಾ ಅನ್ನೋದು ಗೊತ್ತೇ ಇರ್ಲಿಲ್ಲ.

ಕಲಾವತಿ :– ನಾನೇನು ಎಲ್ಲಾರ ಹಾಗೆ ಅಂದ್ಕೊಂಡ್ರಾ. . . *(ಹೆಮ್ಮೆಯಿಂದ)* ಜಗದ್ವಿಖ್ಯಾತ ಖಗೋಳಜ್ಞ. ವೇದವಿಶಾರದ, ಕವಿಭಾಸ್ಕರ, ಭಾಸ್ಕರಾಚಾರ್ಯರ ಧರ್ಮಪತ್ನಿ. . . ಆದರೆ, (ದುಃಖದಿಂದ) ಮಗಳಿಗೆ ಮದುವೆಯ ವಯಸ್ಸು ಮೀರಿದ್ದರೂ, ಅವಳಿಗೆ ಮದುವೆಮಾಡಲಾಗದ ದುರ್ಭಾಗ್ಯ.

ಭಾಸ್ಕರ :– ಈಗಲೇ ಅವಳ ಮದುವೆಗೆ ಏನ್ ಅವಸರ. . . . ಅವಳ ವಿದ್ಯಾಭ್ಯಾಸ ಪೂರ್ಣವಾಗಲಿ.

ಕಲಾವತಿ :– ಅವಳ ವಿದ್ಯಾಭ್ಯಾಸ ಪೂರ್ಣವಾಗೋದು ಯಾವ ಜನ್ಮಕ್ಕೋ. . . . ನಿಮಗೇನು, ಗಂಡಸರು. ನಿಮಗೆ ಇದೆಲ್ಲಾ ಹೇಗೆ ತಿಳಿಯುತ್ತೇ.

ಭಾಸ್ಕರ :– ಅದೇನು ನನಗೆ ತಿಳೀದೇಯಿರೋ ಅಂಥಾದ್ದು.

ಕಲಾವತಿ :– ಲೀಲಾವತೀ ಜೊತೆಯ ಹುಡುಗೀರ್ಗೆಲ್ಲಾ ಮದ್ವೆಯಾಗಿ ಮಕ್ಕಳಾಗಿವೆ. . . . ಅಷ್ಟವರ್ಷೇ ಭವೇತ್ ಕನ್ಯಾ ಅನ್ನೋದು ನಿಮಗ್ಗೊತಿಲ್ವೇನು? ಜೊತೆಯೋರನ್ನ ನೋಡಿ ಅವಳಿಗೂ ಆಸೆ ಆಗೋಲ್ವೇ.

ಭಾಸ್ಕರ :– *(ಕಾತುರತೆಯಿಂದ)* ಲೀಲಾವತಿ ನಿನ್ನ ಹತ್ತಿರ ಮದುವೆ ವಿಷಯ ಹೇಳಿದ್ಲೇನು ?

ಕಲಾವತಿ:– ಅವಳು ನನ್ನ ಮಗಳು. . . ಹೇಳ್ದೇ ಇದ್ರು, ಅವಳ ಮನಸ್ಸೇನು ಅನ್ನೋದು ನನಗ್ಗೊತ್ತಾಗೋಲ್ವೇ. ನಿಮಗಂತೂ, ನಿಮ್ಮ ಅಧ್ಯಯನ, ಪಾಠಪ್ರವಚನ, ಖಗೋಳ ಸಂಶೋಧನೆ,

ಇವೇ ನಿಮ್ಮ ಪ್ರಪಂಚ ನಾವುಗಳಿರೋದೂ ನಿಮಗೆ ನೆನಪಿಗೆ ಬರುತ್ತೋ ಇಲ್ವೋ ?

ಭಾಸ್ಕರ :– *(ಅನ್ಯಮನಸ್ಕರಾಗಿ)* ನಾಳೆಯೇ, ವರನ ತಂದೆಯನ್ನ ವಿಚಾರಿಸಿ ಜಾತಕ ಪಡೀತೀನಿ.

ಕಲಾವತಿ :– *(ಆಶ್ಚರ್ಯದಿಂದ)* ಜಾತಕ, . . . ವರನ ತಂದೆ, . . . ವರಾನ ಆಗಲೇ ನೋಡಿದೀರಾ? ವರ ಯಾರು ?

ಭಾಸ್ಕರ :– *(ಕ್ಷಮೆ ಬೇಡುವಂತೆ)* ಹೇಳಲು ಮರೆತೆ, . . . ಏನೂ ಅಂದ್ಕೋಬೇಡ. . . . ವರ, . . ನಮ್ಮ ಅಹೋಬಲನ ಅಕ್ಕನ ಮಗ.

ಕಲಾವತಿ :– ಆದರೆ, . . . ಲೀಲಾವತಿಯ ಜಾತಕದ ವಿಷಯ, . . . ಅವರಿಗೆ ಹೇಳಿದೀರಾ ?

ಭಾಸ್ಕರ :– ಹೇಳಿಲ್ಲ . . . ಆದ್ರೆ, ಅವರಿಗೂ ತಿಳಿದಿದೆ ಅಂತ ಕಾಣುತ್ತೆ. . . . ಎಲ್ಲ ಸಮಸ್ಯೇಗೂ ಉತ್ತರಾ ಇದ್ದೇಇರುತ್ತೆ ಅಂತ ಹೇಳಿದ್ರು. . . . ಅದೂ ಅಲ್ಲದೆ, ಮನೋಬಲ, ದೈವಬಲ ಇದ್ರೆ, ಯಾವ ಜಾತಕ ಫಲಾನ್ನೂ ಬದಲಾಯಿಸ ಬಹುದು. *(ಇಬ್ಬರೂ ಮೌನವಾಗಿ ಚಿಂತಿಸುವರು)*

**ತೆರೆ**

## ಪ್ರವೇಶ – ೬

*(ಸೂತ್ರಧಾರ ಮತ್ತು ಗೆಳತಿಯ ಪ್ರವೇಶ)*

ಸೂತ್ರಧಾರ :– ಭಾಸ್ಕರಾಚಾರ್ಯರು ಧರ್ಮಪತ್ನಿ ಕಲಾವತಿಗೆ ಹೇಳಿದಂತೆ, ವರನ ಜಾತಕವನ್ನು ಪಡೆದು, ಸಂಪ್ರದಾಯದಂತೆ, ಮಗಳ ವೈಧವ್ಯಯೋಗವನ್ನು ತಪ್ಪಿಸಬಲ್ಲ ಸುಮುಹೂರ್ತವನ್ನು ಅವಳ ಲಗ್ನಕ್ಕೆ ನಿರ್ಧರಿಸಿ, ಸುಮುಹೂರ್ತವನ್ನು ನಿಖರವಾಗಿ ಅಳೆಯಬಲ್ಲ ಜಲಯಂತ್ರವನ್ನು ತಯಾರಿಸಲು ನಿರ್ಧರಿಸಿದರು.

ಗೆಳತಿ :– ಆಚಾರ್ಯರು ಗೊಡ್ಡು ಮೂಢನಂಬಿಕೆಗಳನ್ನು ನಂಬಿದವರಲ್ಲ, ಹೆಣ್ಣುಮಗುವಿನ ಜನನವನ್ನೂ ಸಹ ಮಹಾಲಕ್ಷ್ಮಿಯ ಆಗಮನ ಎಂದು ಹರ್ಷಿಸಿದವರು, . . .ಅಂಥವರು, ಮಗಳ ಜಾತಕ ಫಲವನ್ನ ಹೇಗೆ ನಂಬಿದರು ?

ಸೂತ್ರಧಾರ :– ಎಷ್ಟೇ ಆದರ್ಶವಾದಿಗಳೂ ಸಹ, ತಮ್ಮ ಪ್ರೀತಿಯಾದವರಿಗೆ ಸಂಬಂಧಿಸಿದ ವಿಷಯಗಳಲ್ಲಿ ಎಚ್ಚರಿಕೆ ವಹಿಸುವುದು ಸಹಜ. . . . ಇಂತಹುದನ್ನ ಇಪ್ಪತ್ತೊಂದನೇ ಶತಮಾನವಾದರೂ, ಈಗಲೂ ಕಾಣಬಹುದಲ್ಲವೇ ? ಅಂಥಾದ್ದರಲ್ಲಿ ಒಂಭೈನೂರು ವರ್ಷಗಳ ಹಿಂದಿನ ಭಾಸ್ಕರಾಚಾರ್ಯರಲ್ಲಿ ಇಂತಹ ಗುಣವಿದ್ದರೆ ಆಶ್ಚರ್ಯವೇಕೆ ?

ಗೆಳತಿ :– ನೀವು ಹೇಳಿದ್ದೂ ನಿಜಾನೇ ಅನ್ನಿ.
ಭಾಸ್ಕರಾಚಾರ್ಯರು ಜಲಯಂತ್ರದ ತಯಾರಿಕೆಯಲ್ಲಿದ್ದಂತಿದೆ. ಹೋಗಿ ನೋಡೋಣ, ಬನ್ನಿ.

*(ನಿರ್ಗಮನ)*

## ದೃಶ್ಯ – ೬

*(ರಾತ್ರಿಯಸಮಯ. ಭಾಸ್ಕರಾಚಾರ್ಯರು ತಮ್ಮ ಸಂಶೋಧನಾ ಕೊಠಡಿಯಲ್ಲಿ, ಜಲಯಂತ್ರವನ್ನು ತಯಾರಿಸುವ ಸಿದ್ಧತೆಯಲ್ಲಿದ್ದಾರೆ. ನಂದಾದೀಪದ ಮಂದವಾದ ಬೆಳಕು ಎಲ್ಲಾಕಡೆಯೂ ಹಬ್ಬಿದೆ. ಸಂಶೋಧನೆಗೆ ಅನುಕೂಲವಾದ ಎತ್ತರವಿರುವ ಮರದ ಹಲಗೆಯಮೇಲೆ, ಕೋಣಮಾಪಿಯನ್ನು ಅಳವಡಿಸಿರುವ ಒಂದು ಲೋಲಕವಿದೆ. ಪಕ್ಕದಲ್ಲೇ ತ್ರಿಪಾದಪೀಠದ ಮೇಲೆ ಎರಡು ಮಣ್ಣಿನ ಮಡಕೆಗಳನ್ನು ಒಂದರಮೇಲೆ ಒಂದರಂತೆ ಇಟ್ಟಿದೆ. ಆಚಾರ್ಯರು ಲೋಲಕದ ಲೋಹವನ್ನು ಆವರ್ತನಗೊಳಿಸಿ, ಎಡಗೈನ ಮುಂಗೈ ನಾಡಿಯನ್ನು ಬಲಗೈ ಬೆರಳುಗಳಿಂದ ಮೆದುವಾಗಿ ಹಿಡಿದು, ಆವರ್ತನಕಾಲವನ್ನು ಎಣಿಸುತ್ತಿದ್ದಾರೆ. ಲೀಲಾವತಿಯು ಬಾಗಿಲಲ್ಲಿ ಕೆಲಸಮಯ ನಿಂತಿದ್ದು, ಒಳಗೆ ಬರುತ್ತಾಳೆ. ಕೆಲಸದಲ್ಲಿ ಲೀನರಾದ ಆಚಾರ್ಯರಿಗೆ ಅವಳ ಆಗಮನದ ಅರಿವೇ ಇಲ್ಲ.)*

ಲೀಲಾವತಿ :– ಅಪ್ಪಾಜಿ, ಮಧ್ಯರಾತ್ರಿ ಮೀರಿತು. . . . ನಿದ್ರೆ ಮಾಡೋಲ್ವೇ ?

ಭಾಸ್ಕರ :– *(ಕೆಲಸವನ್ನು ಮುಂದುವರಿಸುತ್ತಾ)* ನಿನಗೆ ನಿದ್ರೆ ಬರಲಿಲ್ವೇ, ಮಗೂ.

ಲೀಲಾವತಿ :– ಬಂದಿತ್ತು. ಆದರೆ ಏಕೋ ಎಚ್ಚರವಾಯ್ತು. . . . ಇಲ್ಲಿ, ದೀಪದ ಬೆಳಕನ್ನ ನೋಡಿ ಬಂದೆ. . . ಏನು ಮಾಡ್ತಿದೀರಿ ಅಪ್ಪಾಜಿ ?

**ಮುತ್ತಿನಮಣಿ**

[ಎರಡನೇ ಭಾಸ್ಕರಾಚಾರ್ಯರ ಜೀವನ ಮತ್ತು ಕೃತಿಗಳನ್ನು ಪರಿಚಯಿಸುವ ಕಿರು ನಾಟಕ]

ಭಾಸ್ಕರ :– *(ಕೆಲಸದಲ್ಲಿ ಮಗ್ನರಾಗಿಯೇ)* ಜಲಯಂತ್ರ, . . . ಲಗ್ನದ ಸುಮುಹೂರ್ತವನ್ನ ನಿಖರವಾಗಿ ಅಳೆಯಬಲ್ಲ ಜಲಯಂತ್ರ.

ಲೀಲಾವತಿ :– *(ವಿಷಾದದಿಂದ)* ಜಲಯಂತ್ರ. ಲಗ್ನದ ಸುಮುಹೂರ್ತ, . . . ನನ್ನ ಲಗ್ನದ ಸುಮುಹೂರ್ತವನ್ನ ನಿರ್ಣಯಿಸೋ ಜಲಯಂತ್ರ . . ಅಪ್ಪಾಜಿ, ನನ್ನಿಂದ ನಿಮಗೆ ಎಷ್ಟು ತೊಂದರೆ. *(ಬಿಕ್ಕಳಿಸುವಳು)*

ಭಾಸ್ಕರ :– *(ಗಾಬರಿಗೊಂಡು, ಹತ್ತಿರಹೋಗಿ ಸಂತೈಸುತ್ತಾ)* ಅಳಬಾರದು ಮಗು, ಅಳ್ಬೇಡ. ಕಣ್ಣೊರೆಸಿಕೋ. ನೀನು ನನ್ನ ಭಾಗ್ಯದೇವತೆ. . . ನನಗಿರೋ ಒಂದೇ ಒಂದು ಆಸರೆ ಅಂದರೆ ನೀನೇ. *(ಮಾತು ಬದಲಿಸಿ)* ಐದಾರು ವರ್ಷಗಳ ಹಿಂದೆ ಪ್ರವಾಸ ಹೋಗಿದ್ವಲ್ಲಾ, ನೆನಪಿದ್ಯಾ ಮಗು ?

ಲೀಲಾವತಿ:– ಒಂದು ದೇವಾಲಯದ ನೆನಪಿದೆ ಅಪ್ಪಾಜಿ, . . . ಅದು ದೇವಾಲಯಾನಾ . . . ಅಥವಾ . . . *(ಯೋಚಿಸುತ್ತಾ)* ಶಿಲ್ಪಕಲಾ ವಸ್ತುಪ್ರದರ್ಶನಾನಾ . . . ಇಲ್ಲ, . . . ಅದು ವಸ್ತುಪ್ರದರ್ಶನ ಅಲ್ಲ, ದೇವಾಲಯವೇ . . . ದೇವಾಲಯ ಅಲ್ಲ, ಶಿಲ್ಪಕಲಾ ವಸ್ತುಪ್ರದರ್ಶನ, ಅದೇನು ಅಪ್ಪಾಜಿ ?

ಭಾಸ್ಕರ *:– (ತ್ರಿಪಾದಸ್ಥಂಭದ ಮೇಲಿದ್ದ ಮೇಲಿನ ಮಡಕೆಯ ತಳಭಾಗವನ್ನು ಪರೀಕ್ಷಿಸುತ್ತಾ)* ಅದು ಶಿಲ್ಪಕಲಾ ವಸ್ತುಪ್ರದರ್ಶನದಂತಿರೋ ದೇವಾಲಯ. . . . ಹೊಯ್ಸಳ ಸಾರ್ವಭೌಮ ವಿಷ್ಣುವರ್ಧನ ಕಟ್ಟಿಸಿದ ಅಪರೂಪದ ದೇವಾಲಯ, . . . ಚನ್ನಕೇಶವ ದೇವಾಲಯ. . . . ಆ ದೇವಾಲಯದಲ್ಲಿ ಎಲ್ಲೂ ಇಲ್ಲದ ಪ್ರತಿಮೆ ಒಂದಿದೆ. . . . ಅದನ್ನ ನಿನಗೆ ತೋರಿಸಿದ್ದೆ. . . . ನಿನಗೆ ನೆನಪಿದ್ಯಾ ?

ಲೀಲಾವತಿ :– ಇದೆ ಅಪ್ಪಾಜಿ, *(ನೆನಪಿಸಿಕೊಳ್ಳುತ್ತಾ)* ಅದು ಹತ್ತು ಕೈಗಳಿರುವ ಈಶ್ವರನ ವಿಗ್ರಹ. . . . ಒಂದೊಂದು ಕೈನಲ್ಲೂ ಒಂದೊಂದು ಆಯುಧ. ಅಂತಹ ವಿಗ್ರಹ ಬೇರೆಲ್ಲೂ ಇಲ್ಲ ಅಂದಿದ್ರಿ.

ಭಾಸ್ಕರ :– ನಿಜ, ಅಂತಹ ವಿಗ್ರಹ ನಾನು ತಿಳಿದಮಟ್ಟಿಗೆ, ಬೇರೆಲ್ಲೂ ಇಲ್ಲ. . . . ವಿಗ್ರಹದಲ್ಲಿದ್ದ ಹತ್ತು ಆಯುಧಗಳ ಹೆಸರುಗಳೇನು, ಹೇಳ್ತೀಯಾ ?

ಲೀಲಾವತಿ :– ಆಗ಼್ಿ ಅಪ್ಪಾಜಿ. . . . *(ನೆನಪಿಸಿಕೊಳ್ಳುತ್ತಾ)* ಪಾಶ, . . ಅಂಕುಶ, . . . ಅಹಿ, . . . ಅಹಿ, . . ಯಾಕೋ ಜ್ಞಾಪಕಕ್ಕೆ ಬರ್ತಿಲ್ಲಾ, ಅಪ್ಪಾಜಿ.

ಭಾಸ್ಕರ :– *(ಕೆಲಸದಲ್ಲಿ ಮಗ್ನರಾಗಿದ್ದಂತೆಯೇ ಗಟ್ಟಿಯಾಗಿ ಹೇಳುವರು.)*

**ಪಾಶಾಂಕುಶಾಹಿಡಮರೂಕಕಪಾಲಶೂಲೈಃ ಖಟ್ವಾಂಗಶಕ್ತಿಶರಚಾಪಯುತೈರ್ಭವಂತಿ ।**
**ಅನ್ಯೋನ್ಯಹಸ್ತಕಲಿತೈಃ ಕತಿ ಮೂರ್ತಿಭೇದಾಃ ಶಂಭೋರ್ಹರೇರಿವ ಗದಾರಿಸರೋಜಶಂಖೈಃ ॥**

ಲೀಲಾವತಿ :– *(ಲೀಲಾವತಿಯು ಅವರು ಹೇಳುವುದನ್ನು ಗಮನವಿಟ್ಟು ಕೇಳಿ, ಸಂತೋಷದಿಂದ)* ಅಪ್ಪಾಜಿ, ಈಗ ನೀವು ರಚಿಸಿದ ಶ್ಲೋಕಾನ ಹಾಡಲೇ ?

ಭಾಸ್ಕರ :– *(ಮಾಡುವಕೆಲಸವನ್ನು ನಿಲ್ಲಿಸಿ, ಪ್ರೀತಿಯಿಂದ ನೋಡುತ್ತಾ)* ಹಾಡಮ್ಮಾ, . . .

ಲೀಲಾವತಿ :– *(ಹಂಸಾನಂದಿ ರಾಗದಲ್ಲಿ ಹಾಡುವಳು)*

**ಪಾಶಾಂಕುಶಾಹಿಡಮರೂಕಕಪಾಲಶೂಲೈಃ ಖಟ್ವಾಂಗಶಕ್ತಿಶರಚಾಪಯುತೈರ್ಭವಂತಿ ।**
**ಅನ್ಯೋನ್ಯಹಸ್ತಕಲಿತೈಃ ಕತಿ ಮೂರ್ತಿಭೇದಾಃ ಶಂಭೋರ್ಹರೇರಿವ ಗದಾರಿಸರೋಜಶಂಖೈಃ ॥**

ಭಾಸ್ಕರ :– ಮಗೂ, ನೀನೀಗ ಏಕಪಾಠಿ. ಒಂದೇ ಸಾರಿ ಕೇಳಿ, ನೆನಪಿನಲ್ಲಿಟ್ಟು ಹೇಳಬಲ್ಲೆ. . . ಭಲೇ ।

ಲೀಲಾವತಿ:– *(ಉತ್ತೇಜನಗೊಂಡು)* ಇದರ ಅರ್ಥಾ ಹೇಳ್ಲ, ಅಪ್ಪಾಜಿ. (ಆಚಾರ್ಯರು ಸಮ್ಮತಿಸುವರು) ಈಶ್ವರನ ಹತ್ತು ಕೈಗಳಲ್ಲೂ ಒಂದು ಕೈನಲ್ಲಿ ಒಂದರಂತೆ ಇರುವ ಹತ್ತು ಆಯುಧಗಳು; ಪಾಶ, ಅಂಕುಶ, ಅಹಿ, ಡಮರುಕ, ಕಪಾಲ, ಶೂಲ, ಖಟ್ವಾಂಗ ಅಂದರೆ ಮುರಿದ ಮಂಚದ ಕಾಲು, ಶಕ್ತ್ಯಾಯುಧ, ಶರ, ಚಾಪ. . . . ಇವುಗಳನ್ನ ಒಂದು ಕೈನಲ್ಲಿ ಒಂದರಂತೆ ಎಲ್ಲಾ ವಿಧಗಳಲ್ಲೂ, ಎಲ್ಲಾ ಆಯುಧಗಳನ್ನೂ ಇರಿಸಿ ಮೂರ್ತಿಗಳನ್ನು ಕೆತ್ತಿಸಿದರೆ, ಈಶ್ವರನ ಮೂರ್ತಿಗಳು ಎಷ್ಟು ಇರುತ್ತವೆ ? . . . ಹೀಗೆಯೇ, ವಿಷ್ಣುವಿನ ನಾಲ್ಕು ಕೈಗಳಲ್ಲಿರುವ ಗದೆ, ಚಕ್ರ, ಕಮಲ ಮತ್ತು ಶಂಖಗಳನ್ನ ನಾಲ್ಕು ಕೈಗಳಲ್ಲೂ ಒಂದು ಕೈಲಿ ಒಂದರಂತೆ ಎಲ್ಲವಿಧದಲ್ಲೂ ಇರಿಸಿ ವಿಗ್ರಹಗಳನ್ನು ಕೆತ್ತಿಸಿದರೆ ವಿಷ್ಣುವಿನ ಮೂರ್ತಿಗಳೆಷ್ಟು.

ಭಾಸ್ಕರ :– ಈ ಸಮಸ್ಯೆಯನ್ನ ಬಿಡಿಸುವ ಸೂತ್ರವೇನು ? . . . ಹೇಳು.

ಲೀಲಾವತಿ :– **ಸ್ಥಾನಾಂತಮೇಕಾದಿಚಯಾಂಕಘಾತಃ ಸಂಖ್ಯಾವಿಭೇದಾ ನಿಯತೈಸ್ಸ್ಯರಂಕೈಃ ॥** . . . ಸಂಖ್ಯೆ ಒಂದರಿಂದ ಪ್ರಾರಂಭಿಸಿ ಒಂದನ್ನೇ ಚಯವಾಗಿಸಿ, ಕೊಟ್ಟಿರುವ ವಿಭೇದ ಸಂಖ್ಯೆಗಳವರೆಗೆ ಬರುವ ಎಲ್ಲಾ ಸಂಖ್ಯೆಗಳ ಗುಣಲಬ್ಧವೇ, ಪಡೆಯಬೇಕಾದ ಉತ್ತರ. . . . ಅಂದರೆ ಈಶ್ವರನ ವಿಗ್ರಹಗಳ ಸಂಖ್ಯೆ, ಒಂದರಿಂದ ಹತ್ತರವರೆಗೆ ಇರುವ ಎಲ್ಲಾ ಪೂರ್ಣಾಂಕಗಳ ಗುಣಲಬ್ಧ. . .

*(ಮನಸ್ಸಿನಲ್ಲೇ ಗುಣಿಸಿ)* ಅದು, ಮೂವತ್ತಾರುಲಕ್ಷದ ಇಪ್ಪತ್ತೆಂಟುಸಾವಿರದ ಎಂಟುನೂರು. . . ವಿಷ್ಣುವಿನ ವಿಗ್ರಹಗಳ ಸಂಖ್ಯೆ ಇಪ್ಪತ್ತನಾಲ್ಕು.

ಭಾಸ್ಕರ :– (ಆನಂದದಿಂದ) **ಗರ್ವಿತಗಣಕಬಹೂನಾಂ ಸ್ಯಾತ್ಪಾತೋऽವಶ್ಯಮಂಕಪಾಶೇಸ್ಮಿನ್ . . .** *ಗರ್ವಿಷ್ಠರಾದ ಗಣಿತ ಬಲ್ಲವರಲ್ಲೂ ಅನೇಕರು ಅಂಕಪಾಶದ ಸಮಸ್ಯೆಯನ್ನು ಬಿಡಿಸುವಾಗ ಎಡವುತ್ತಾರೆ,* ಅಂಥಾದ್ದರಲ್ಲಿ, ಅಂಕಪಾಶದ ಸಮಸ್ಯೆಯನ್ನೂ ಬಿಡಿಸಬಲ್ಲ ನೀನು ಈಗ ಪೂರ್ಣ ವಿದ್ಯಾವಂತೆ. . . . ನಿನ್ನನ್ನ ಮಗಳಾಗಿ ಪಡೆದಿದ್ದು ನನ್ನ ಪೂರ್ವಜನ್ಮದ ಪುಣ್ಯ.

ಲೀಲಾವತಿ :– *(ನಾಚಿ, ಮಾತು ಬದಲಿಸಲು)* ಅಪ್ಪಾಜಿ, ಈಗ ನೀವು ಬರೀತಿರೋ ಗ್ರಂಥಕ್ಕೆ ಏನು ಹೆಸರಿಡ್ತೀರಿ. ಸಾಯನಾಚಾರ್ಯರಿಗಂತೂ ನಿಮ್ಮ ಗ್ರಂಥಾನ ಎಷ್ಟು ಹೊಗಳಿದರೂ ಸಾಲದು. . . . ನೀವು ಈಗತಾನೇ ಕಂಡುಹಿಡಿದಿರೋ ಚಕ್ರವಾಳ ವಿಧಾನವಂತೂ ಭಾರತೀಯ ಗಣಿತಕ್ಕೆ ನೀವು ನೀಡಿರೋ ಉತ್ಕೃಷ್ಟ ಕೊಡುಗೆಯಂತೆ.

ಭಾಸ್ಕರ :– ನನ್ನ ಕೊಡುಗೆ. . . . ಅದು ಹೇಗೆ ನನ್ನದೋ ನಾನಂತೂ ಕಾಣೆ. . . . ನಿಜಾ ಹೇಳೋದಾದ್ರೆ,

**ಬ್ರಹ್ಮಾಹ್ವಯಶ್ರೀಧರಪದ್ಮನಾಭಬೀಜಾನಿ ಯಸ್ಮಾದತಿವಿಸ್ತೃತಾನಿ ।**
**ಆದಾಯ ತತ್ಸಾರಮಕಾರಿ ನೂನಂ ಸದ್ಯುಕ್ತಿಯುಕ್ತಂ ಲಘು ಶಿಷ್ಯತುಷ್ಟ್ಯೈಃ ॥**

ಲೀಲಾವತಿ :– ಅಪ್ಪಾಜಿ, ***ಬ್ರಹ್ಮಗುಪ್ತ, ಶ್ರೀಧರ, ಪದ್ಮನಾಭ ಮೊದಲಾದವರ ವಿಸ್ತಾರವಾದ ವಿಷಯಗಳ ಸಾರವನ್ನೆಲ್ಲಾ ಸಂಗ್ರಹಿಸಿ, ಒಳ್ಳೆಯ ವಿಧಾನಗಳು ಮತ್ತು ಪ್ರಮೇಯಗಳಿರುವ ಈ ಗ್ರಂಥವನ್ನು ಸಂಪಾದಿಸಿದ್ದೇನೆ*** ಅಂತ ಈ ಶ್ಲೋಕದ ರೂಪದಲ್ಲಿ ನೀವು ಹೇಳಿದ್ದು, ನಿಮ್ಮ ದೊಡ್ಡಗುಣ.

ಭಾಸ್ಕರ :– ಓ, ಈಗ ನಾನು ರಚಿಸಿದ ಈ ಶ್ಲೋಕಕ್ಕೂ ಅರ್ಥ ಹೇಳ್ಬಿಟ್ಟೇ ! . . . ಈಗಲೀಗ ನಿನ್ನ ವಿಷಯದಲ್ಲಿ ಏನೇನೂ ಸಂಶಯವಿಲ್ಲ. . . . ***ಒಳ್ಳೆಯ ಮನೆತನದಲ್ಲಿ ಹುಟ್ಟಿ, ಒಳ್ಳೆಯ ಗುಣವಂತೆಯಾಗಿ, ಮಧುರವಚನಗಳಿಂದ ಎಲ್ಲರನ್ನೂ ಸಂತೋಷಪಡಿಸುವ ನಿನ್ನನ್ನ, ಮದುವೆ ಆಗುವವ ನಿಜವಾಗಿಯೂ ಭಾಗ್ಯಶಾಲಿ. ಅವನಲ್ಲಿರುವ ಸುಖ ಸಂಪತ್ತುಗಳು ಖಂಡಿತ ವೃದ್ಧಿಯಾಗುವುವು.*** *(ಕವನವನ್ನೇ ರಚಿಸಿ ಸಿಂಧುಭೈರವಿ ರಾಗದಲ್ಲಿ ಹಾಡುವರು)*

**ಏಷಾಂ ಸುಜಾತಿಗುಣವರ್ಗವಿಭೂಷಿತಾಂಗೀ ಶುದ್ಧಾಖಿಲವ್ಯವಹೃತಿಃ ಖಲು ಕಂಠಸಕ್ತಾ ।**
**ಲೀಲಾವತೀಹ ಸರಸೋಕ್ತಿಮುದಾಹರಂತೀ ತೇಷಾಂ ಸದೈವ ಸುಖಸಂಪದುಪೈತಿ ವೃದ್ಧಿಮ್ ॥**

ಲೀಲಾವತಿ :– *(ಉತ್ಸಾಹದಿಂದ)* ನಿಮ್ಮ ಗ್ರಂಥದ ಹೆಸರನ್ನ ಹೇಳೇ ಬಿಟ್ರಲ್ಲಾ ಅಪ್ಪಾಜಿ. *(ಆಚಾರ್ಯರು ಅವಾಕ್ಕಾಗಿ ನೋಡುವರು)* ಈಗ ನೀವು ಹಾಡಿದ ಕವನದ ಅರ್ಥ; ***ಭಿನ್ನರಾಶಿ, ಗುಣಾಕಾರ, ಸಂಖ್ಯೆಗಳ ವರ್ಗ ಮೊದಲಾದ ವಿಷಯಗಳೊಡನೆ ಎಲ್ಲಾ ಸಮಸ್ಯೆಗಳನ್ನೂ ಸರಳವಾಗಿ ಬಿಡಿಸಬಲ್ಲ ವಿಧಾನಗಳಜೊತೆಗೆ ಸೂಕ್ತವಾದ ಉದಾಹರಣೆಗಳನ್ನೂ ಹೊಂದಿರುವ ಲೀಲಾವತೀ ಎಂಬ ಈ ಗ್ರಂಥವನ್ನು ಯಾರು ಕಂಠಪಾಠ ಮಾಡುವರೋ ಅಂಥವರಿಗೆ ಖಂಡಿತವಾಗಿಯೂ ಸುಖಸಂಪತ್ತುಗಳು ವೃದ್ಧಿಯಾಗುವುವು.*** . . . ಈ ಅರ್ಥ ತಪ್ಪೇ ಅಪ್ಪಾಜಿ.

ಭಾಸ್ಕರ :– (ವಿಸ್ಮಯರಾಗಿ) ಈ ಅರ್ಥ ನನಗೆ ಹೊಳದೇ ಇರ್ಲಿಲ್ಲ. (ಅಭಿಮಾನದಿಂದ) ಈಗ ನೀನು ನಿನ್ನ ಗುರುವಾದ ನನ್ನನ್ನೇ ಮೀರಿಸಿದೆ. . . . ***ಶಿಷ್ಯಾದಿಚ್ಛೇತ್ ಪರಾಜಯಮ್*** ಅನ್ನೋ ನಾಣ್ನುಡಿಯನ್ನ ನಿಜವಾಗಿಸಿ ನನ್ನನ್ನ ಗೌರವಿಸಿದೆ. . . ಮಗಳೇ, ನಿನ್ನನ್ನ ಶಿಷ್ಯೆಯಾಗಿ ಪಡೆದ ನಾನೇ ಧನ್ಯ.

[ಕೆಳಗಿನ ಶ್ಲೋಕವನ್ನು ರಾಗ ರೇವತಿಯಲ್ಲಿ ಹಾಡುತ್ತಿರುವುದು ಕೇಳಿಬರುತ್ತಿರುವಹಾಗೆಯೇ, ತೆರೆಯು ನಿಧಾನವಾಗಿ ಮುಚ್ಚುತ್ತದೆ]

**ಏಷಾಂ ಸುಜಾತಿಗುಣವರ್ಗವಿಭೂಷಿತಾಂಗೀ**
**ಶುದ್ಧಾಖಿಲವ್ಯವಹೃತಿಃ ಖಲು ಕಂಠಸಕ್ತಾ ।**
**ಲೀಲಾವತೀಹ ಸರಸೋಕ್ತಿಮುದಾಹರಂತೀ**
**ತೇಷಾಂ ಸದೈವ ಸುಖಸಂಪದುಪೈತಿವೃದ್ಧಿಮ್ ॥**

**॥ ಶುಭಮ್ ॥**

## ಮುತ್ತಿನಮಣಿ

[ಎರಡನೇ ಭಾಸ್ಕರಾಚಾರ್ಯರ ಜೀವನ ಮತ್ತು ಕೃತಿಗಳನ್ನು ಪರಿಚಯಿಸುವ ಕಿರು ನಾಟಕ]